ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

09 ಮೇ 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 59 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ನವದೆಹಲಿಯಲ್ಲಿ ಕೆಕೆಆರ್ ವಿರುದ್ಧ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ನಲ್ಲಿ 8 ವಿಕೆಟ್ ಕಳೆದುಕೊಂಡು 142 ರನ್ ಗಳಿಸಿದೆ.


ಮಕ್ಕಳು ಹೆತ್ತವರ ಮುಂದೆ ಏಕೆ ಸುಳ್ಳು ಹೇಳುತ್ತಾರೆ ? » 2


ವಿದ್ಯಾರ್ಥಿಗಳನ್ನು ಸನ್ಮಾನಿಸುವುದು ಸಮಾಜಕ್ಕೆ ಪ್ರೇರಣೆ » 3


ಟಿವಿಕೆ ಸರ್ಕಾರ ರಚನೆಗೆ ರಾಜ್ಯಪಾಲರ ಸಮ್ಮತಿ » 4

# ರಾಜ್ಯದಲ್ಲಿ ಪ್ರಾದೇಶಿಕ ಪಕ್ಷಕ್ಕೆ ಅಧಿಕಾರ ಕಷ್ಟ

## ಇಲ್ಲಿಯ ರಾಜಕಾರಣಕ್ಕೂ, ಬೇರೆ ರಾಜ್ಯದ ರಾಜಕಾರಣಕ್ಕೂ ವ್ಯತ್ಯಾಸವಿದೆ : ಹೆಚ್.ಡಿ.ಕುಮಾರಸ್ವಾಮಿ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷಗಳು ಸ್ವತಂತ್ರವಾಗಿ ಅಧಿಕಾರಕ್ಕೆ ಬರುವ ವಾತಾವರಣವಿಲ್ಲ. ಇಲ್ಲಿಯ ರಾಜಕಾರಣಕ್ಕೂ, ಬೇರೆ ರಾಜ್ಯಗಳ ರಾಜಕಾರಣಕ್ಕೂ ಬಹಳಷ್ಟು ವ್ಯತ್ಯಾಸ ವಿದೆ ಎಂದು ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ ಅವರು ಹೇಳಿದರು.

ಹೊಳೆನರಸೀಪುರ ತಾಲ್ಲೂಕಿನ ಮಾವಿನಕೆರೆ ಶ್ರೀ ಬೆಟ್ಟದ ರಂಗನಾಥ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ಕರ್ನಾಟಕದಲ್ಲೂ ಮುಂದಿನ ಚುನಾವಣೆಯಲ್ಲಿ ಬದಲಾವಣೆ ಆಗಬಹುದೆಂಬುದು ಜನಸಾಮಾನ್ಯರ ನಡುವೆ ಚರ್ಚೆ ಆಗುತ್ತಿದೆ. ಏನಾಗುತ್ತೆ ಎಂದು ಕಾದು ನೋಡೋಣ ಎಂದರು.

**ವೋಟ್ ಚೋರಿ ಚರ್ಚೆ ಅರ್ಥಹೀನ**

ಶೃಂಗೇರಿ ಮರು ಎಣಿಕೆ ವಿಚಾರವಾಗಿ ಪ್ರತಿಕ್ರಿಯಿಸಿ, ಈ ಬಗ್ಗೆ ಎಫ್ಐಆರ್ ಆಗಿದೆ.ರಾಜೇಗೌಡರು ಚುನಾವಣೆ ಆಯೋಗಕ್ಕೆ ಮತ್ತೊಂದು ದೂರು ಕೊಟ್ಟಿದ್ದಾರೆ. ಏನೇನೂ ಬೆಳವಣಿಗೆ ಆಗುತ್ತದೆಂದು ಮುಂದೆ ನೋಡೋಣ. ಈಗಿನ ಪರಿಸ್ಥಿತಿಯಲ್ಲಿ ವೋಟ್ ಚೋರಿ ಚರ್ಚೆ ಅರ್ಥಹೀನ. ಇಡಿ, ಐಟಿ ದುರುಪಯೋಗ ಎಂಬ ಕಾಂಗ್ರೆಸ್ ಆರೋಪಕ್ಕೆ ಅವರಿಗೆ ಬೇಕಾದಂತೆ ವ್ಯಾಖ್ಯಾನ ಮಾಡುತ್ತಾರೆ. ಅವರಿಗೆ ಬೇಕಾದಾಗ ಚೆನ್ನಾಗಿದೆ ಅಂತಾರೆ, ಸೋತಾಗ ಚೆನ್ನಾಗಿಲ್ಲ ಎನ್ನುತ್ತಾರೆ ಎಂದರು.



**ವಿಜಯ್‌ನನ್ನು ದೇವರೇ ಕಾಪಾಡಲಿ**

ತಮಿಳುನಾಡಿನ ಬಜೆಟ್ ವರ್ಷಕ್ಕೆ 3.40 ಲಕ್ಷ ಕೋಟಿ ಇದೆ. ಆದರೆ, ವಿಜಯ್ ಉಚಿತ ಗ್ಯಾರಂಟಿಗಳನ್ನು ನೀಡಲು 6 ರಿಂದ 7 ಲಕ್ಷ ಕೋಟಿ ಬೇಕು. ಅದ್ಯಾವ ರೀತಿ ಹಣ ಹೊಂದಿಸುತ್ತಾರೆ ಕಾದು ನೋಡಬೇಕು. ವಿಜಯ್ ಅವರನ್ನು ದೇವರೇ ಕಾಪಾಡಬೇಕು. ಒಂದು ತಿಂಗಳ ಹಿಂದೆ ನಮ್ಮ ಸ್ನೇಹಿತರಿಗೆ ಹೇಳಿದ್ದೆ. ಕಳೆದ 50 ವರ್ಷಗಳಿಂದ ಎರಡು ದ್ರಾವಿಡ ಪಕ್ಷಗಳ ಆಡಳಿತ ಏನೆಂದು ಅಲ್ಲಿಯ ಜನ ನೋಡಿದ್ದಾರೆ. ಒಂದು ಹೊಸ ವ್ಯವಸ್ಥೆ ತರಲು ಜನ ಸಾಮಾನ್ಯರು ನಿರ್ಧಾರ ಮಾಡ್ತಾರೆಂಬ ನನ್ನ ನಿರೀಕ್ಷೆ ನಿಜವಾಗಿದೆ ಎಂದು ಹೇಳಿದರು.

ಡಿಎಂಕೆ-ಎಐಎಡಿಎಂಕೆ ಎರಡೂ ಪಕ್ಷಗಳು ಸೇರಿ ಸರ್ಕಾರ ರಚನೆ ಮಾಡುವುದು ನನ್ನ ರಾಜಕೀಯ ಅನುಭವದಲ್ಲಿ ಊಹಾಪೋಹಾ,

> ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮ ನಡೆಯುತ್ತಿದ್ದು, 50 ವರ್ಷದ ಸಾಧನೆ ಬಗ್ಗೆ, ರಾಜ್ಯಕ್ಕೆ ಕೊಟ್ಟಿರುವ ಕೊಡುಗೆ ಬಗ್ಗೆ ಬಿಜೆಪಿ ಪಕ್ಷದಿಂದ ಕಾರ್ಯಕ್ರಮ ನಡೀತಿದೆ, ನನಗೆ ಬೇರೆ ಕಾರ್ಯ ಕ್ರಮ ಇರುವುದರಿಂದ ನಾನು ಭಾಗವಹಿಸುತ್ತಿಲ್ಲ.
> -ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಹೀಗೆ ಆಲೋಚಿಸುವುದೇ ತಪ್ಪು. ಎರಡೂ ಪಕ್ಷಗಳು ಸೇರಿ ಸರ್ಕಾರ ಮಾಡುವುದಿಲ್ಲ ಅನ್ನೋದು ನನ್ನ ಅನುಭವದ ಮಾತು. ತಮಿಳುನಾಡಿದ ರಾಜಕಾರಣದ ಬಗ್ಗೆ ಮೊದಲಿನಿಂದಲೂ ಎಲ್ಲರಿಗೂ ಗೊತ್ತಿದೆ. ಅಲ್ಲಿನ ಜನರು ಸ್ವಲ್ಪ ಸಿನಿಮಾ ಪ್ರಭಾವಕ್ಕೆ ಒಳಗಾಗುತ್ತಾರೆ. ಹೀಗಾಗಿ ಹೊಸ ವ್ಯಕ್ತಿಗೆ ಅಧಿಕಾರ ನೀಡಲು ಜನ ಬಯಸಿದ್ದಾರೆ. ಮಾಧ್ಯಮಗಳು ಡಿಎಂಕೆ ಅಧಿಕಾರಕ್ಕೆ ಬರುತ್ತದೆ ಎಂದು ಭವಿಷ್ಯ ನುಡಿದಿದ್ದವು.ಆದರೆ, ವಿಜಯ್ ಅವರ ಈ ಸಾಧನೆಯನ್ನು ಯಾರೂ ನಿರೀಕ್ಷಿಸಿರಲಿಲ್ಲವೆಂದರು.

**ಕಾಂಗ್ರೆಸ್ ಬಗ್ಗೆ ನಾನ್ ಹೇಳ್ಬೇಕಾ...**


ಕಾಂಗ್ರೆಸ್ ಪಕ್ಷದ ನಡವಳಿಕೆ ಬಗ್ಗೆ ನಾನು ಚರ್ಚೆ ಮಾಡುವುದು ಅನಾವಶ್ಯಕ. ಕಾಂಗ್ರೆಸ್ ಯಾವ್ಯಾವ ಸಂದರ್ಭದಲ್ಲಿ, ಯಾವ್ಯಾವ ರೀತಿ ಸರ್ಕಾರಗಳನ್ನು ಅಸ್ಥಿರಗೊಳಿಸಿದ್ದಾರೆಂಬುವುದು ತಿಳಿದಿದೆ. ಕೇಂದ್ರದಲ್ಲಿದ್ದಂತಹ ಚರಣ್ ಸಿಂಗ್ ಅವರಿಂದ ಪ್ರಾರಂಭವಾಗಿ ವಿ.ಪಿ.ಸಿಂಗ್, ಚಂದ್ರಶೇಖರ್‌ವರೆಗೆ ಅಷ್ಟೇ ಅಲ್ಲ, ದೇವೇಗೌಡರು ಅಧಿಕಾರದಲ್ಲಿದ್ದಾಗ ಯಾವ ಕಾರಣಗಳನ್ನು ಕೊಟ್ಟು ಸರ್ಕಾರ ತೆಗೆದರು ಎಂಬುವುದು ಎಲ್ಲರಿಗೂ ಗೊತ್ತೇ ಇದೆ. ಇವತ್ತು ಡಿಎಂಕೆ ಜೊತೆ 20 ವರ್ಷದ ಸಂಬಂಧ ಕಡಿದು ವಿಜಯ್ ಅವರ ಜೊತೆ ಸೇರಿದ್ದಾರೆ. ಅವರ ಪಕ್ಷದ ಮುಂದಿನ ಭವಿಷ್ಯದ ದೃಷ್ಟಿಯಿಂದ ತೀರ್ಮಾನ ತೆಗೆದುಕೊಂಡಿದ್ದಾರೆ. ಕಾಲ ಅದಕ್ಕೆ ಉತ್ತರ ಕೊಡುತ್ತದೆ ಎಂದು ಕುಮಾರಸ್ವಾಮಿ ಅವರು ಕಿಡಿಕಾರಿದರು.

ತಮಿಳುನಾಡಿನ ರಾಜಕೀಯ ಬಿಕ್ಕಟ್ಟಿನ ಬಗ್ಗೆ ಮಾತನಾಡಿದ ಸಚಿವರು, ರಾಜ್ಯಪಾಲರು ಕಾನೂನು ತಜ್ಞರ ಸಲಹೆಯಂತೆ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ. ವಿಜಯ್ ಅವರಿಗೆ ಬಹುಮತ ಸಾಬೀತು ಪಡಿಸಲು ಸೂಚಿಸಲಾಗಿದೆ. ಸ್ಟಾಲಿನ್ ಅವರು ಆರು ತಿಂಗಳು ಸರ್ಕಾರ ನಡೆಸಲಿ, ನಾವು ತೊಂದರೆ ಕೊಡಲ್ಲವೆಂದು ವಿಜಯ್ ಹೇಳಿದ್ದಾರೆ. ಮುಂದಿನ ಎರಡು ದಿನಗಳಲ್ಲಿ ಅಸ್ಪಷ್ಟತೆ ದೂರವಾಗಬಹುದು. ಆದರೆ, ಡಿಎಂಕೆ ಮತ್ತು ಎಐಎಡಿಎಂಕೆ 2 ಪಕ್ಷಗಳು ಸೇರಿ ಸರ್ಕಾರ ರಚಿಸುತ್ತವೆಂಬುದು ಕೇವಲ ಊಹಾಪೋಹಾವೆಂದು ಅಭಿಪ್ರಾಯಪಟ್ಟರು.

ಪಶ್ಚಿಮ ಬಂಗಾಳದ ರಾಜಕೀಯ ಪರಿಸ್ಥಿತಿಯ ಬಗ್ಗೆ ಪ್ರತಿಕ್ರಿಯಿಸಿ, ಬಿಜೆಪಿಗೆ ಸ್ಪಷ್ಟ ಬಹುಮತ ಬಂದಿದೆ ಎಂದು ಚುನಾವಣಾ ಆಯೋಗದಿಂದ ಘೋಷಣೆಯಾದರೂ ಮಮತಾ ಬ್ಯಾನರ್ಜಿ ಅವರು ರಾಜೀನಾಮೆ ಕೊಡಲ್ಲ ಎನ್ನುವುದು ಬಾಲಿಷ ಹೇಳಿಕೆ. ಆ ರೀತಿಯ ವಾತಾವರಣ ನಮ್ಮ ಸಂವಿಧಾನದಲ್ಲಿ ಇಲ್ಲ ಎಂದರು.

# ಬೂವನಹಳ್ಳಿ ದೇವಿರಮ್ಮ ಜಾತ್ರೆಗೆ ಹೆಚ್.ಡಿ.ಕೆ. ಚಾಲನೆ





• ಪ್ರಜೋದಯ ವರದಿ

**ಹಾಸನ:** ಬೂವನಹಳ್ಳಿ ಗ್ರಾಮದ ಶ್ರೀ ದೇವಿರಮ್ಮ ಜಾತ್ರಾ ಮಹೋತ್ಸವಕ್ಕೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಶುಕ್ರವಾರ ಚಾಲನೆ ನೀಡಿದರು.


ಮೂರು ದಿನಗಳ ಕಾಲ ನಡೆಯುವ ದೇವಿರಮ್ಮ ರಥೋತ್ಸವ ಮತ್ತು ಜಾತ್ರೆಯ ಅಂಗವಾಗಿ ಮೊದಲ ದಿನ ಆರಂಭದಲ್ಲಿ ದೇವತೆಗೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ಅವರು, ದೇವರ ಆಶೀರ್ವಾದ ಎಲ್ಲರ ಮೇಲಿರಲಿ, ಎಲ್ಲಾ ರೀತಿಯಲ್ಲೂ ಜನರು ಸುಭಿಕ್ಷವಾಗಿರಲಿ ಎಂದು ಆಶಿಸಿದರು.

ಇಂದು ಜಾತ್ರೋತ್ಸವಕ್ಕೆ ಚಾಲನೆ ನೀಡಿ ದೇವಿಯ ಆಶೀರ್ವಾದ ಪಡೆದಿರುವುದು ಸಂತೋಷ ತಂದಿದೆ. ಹಾಗೆಯೇ ನಮ್ಮ ಕುಟುಂಬದ ಸದಸ್ಯರು ಜಿಲ್ಲೆಗೆ ಬರುವ ಸಂದರ್ಭದಲ್ಲಿ ಮಾವಿನಕೆರೆ ಬೆಟ್ಟದ ರಂಗನಾಥಸ್ವಾಮಿ ದೇವಾಲಯಕ್ಕೆ ಭೇಟಿ ನೀಡುವುದು ಸರ್ವೆ ಸಾಮಾನ್ಯ. ನಾನೂ ಇಂದು ದೇವರ ದರ್ಶನ ಪಡೆದಿದ್ದೇನೆಂದರು.

ರಾಜ್ಯದಲ್ಲಿ ಇತ್ತೀಚೆಗೆ ನಡೆದ ಎರಡು ಉಪ ಚುನಾವಣೆ ಫಲಿತಾಂಶ ಮುಂದಿನ ಯಾವುದೇ ಚುನಾವಣೆಗೆ ದಿಕ್ಸೂಚಿ ಅಲ್ಲವೆಂದ ಅವರು, ಮುಂಬರುವ ಜಿಲ್ಲಾ ಮತ್ತು ತಾಲ್ಲೂಕು ಚುನಾವಣೆಗೆ ಎಲ್ಲಾ ಪಕ್ಷಗಳು ಸಿದ್ಧತೆ ಮಾಡಿಕೊಳ್ಳುತ್ತಿರುವಂತೆಯೇ ಜೆಡಿಎಸ್ ಸಹ ತಯಾರಿ ಮಾಡಿಕೊಳ್ಳುತ್ತಿದೆ ಎಂದು ಹೇಳಿದರು. ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ಬೂವನಹಳ್ಳಿ ಗ್ರಾಮಸ್ಥರು ಇದ್ದರು.

# ಭಗವಂತನ ಸ್ಮರಣೆಯೊಂದಿಗೆ ಶ್ರಮಪಟ್ಟರೆ ಗುರಿ ಸಾಧ್ಯ

## ಭಗೀರಥ ಮಹರ್ಷಿ ಜಯಂತಿಯಲ್ಲಿ ಮಾಜಿ ಸಚಿವ ಎ.ಮಂಜು ಅಭಿಮತ





• ಪ್ರಜೋದಯ ವರದಿ

**ರಾಮನಾಥಪುರ:** ಮನುಷ್ಯ ಬದುಕಿನಲ್ಲಿ ನಿರ್ದಿಷ್ಟ ಗುರಿ ಹೊಂದಿ ಸಾಗುವಾಗ ಅನೇಕ ಅಡೆತಡೆಗಳು ಎದುರಾಗುವುದು ಸಹಜ. ಆದರೆ, ಭಗವಂತನ ಸ್ಮರಣೆಯೊಂದಿಗೆ ಪ್ರಾಮಾಣಿಕ ಶ್ರಮಪಟ್ಟರೆ ಮಾತ್ರ ಗುರಿ ತಲುಪಲು ಸಾಧ್ಯವೆಂದು ಮಾಜಿ ಸಚಿವ ಎ. ಮಂಜು ಅವರು ಹೇಳಿದರು.

ಅತ್ತಿಮರದಕೊಪ್ಪಲು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಭಗೀರಥ ಮಹರ್ಷಿ ಜಯಂತಿ, ಭಗೀರಥ ಕಂಚಿನ ಪ್ರತಿಮೆ ಅನಾವರಣ ಹಾಗು ಧಾರ್ಮಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಸಂಸ್ಕಾರದ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಭವ್ಯ ಭಾರತ ನಿರ್ಮಾಣಕ್ಕೆ ಯುವ ಸಮುದಾಯದ ಪಾತ್ರ ಮಹತ್ವದ್ದಾಗಿದೆ. ಭಗೀರಥ ಮಹರ್ಷಿಗಳು ಎಲ್ಲರಿಗೂ ಧರೆಯ ಮೇಲೆ ನೀರಿನ ಮಹತ್ವವನ್ನು ಪರಿಚಯಿಸಿದ ಮಹಾನ್ ವ್ಯಕ್ತಿತ್ವ ಎಂದು ಬಣ್ಣಿಸಿದರು.

ಉಪ್ಪಾರ ಸಮುದಾಯದ ಅಭಿವೃದ್ಧಿಗಾಗಿ ತಾಲ್ಲೂಕು ಮಟ್ಟದಲ್ಲಿ ಒಂದು ನಿವೇಶನ ಒದಗಿಸಲಾಗುವುದು. ಅದಕ್ಕೆ ಸಂಬಂಧಿಸಿದ ಸರ್ಕಾರದ ಹಣವನ್ನು ಕಟ್ಟಿಸಿಕೊಡುವಂತೆ ತಹಸೀಲ್ದಾರ್ ಕೆ.ಸಿ.ಸೌಮ್ಯ ಅವರಿಗೆ ಮನವಿ ಮಾಡಿದರು.

» ನಾಲ್ಕನೇ ಪುಟದಲ್ಲಿ

**ಕಂಚಿನ ಪ್ರತಿಮೆ ಅನಾವರಣ**

ಕಾರ್ಯಕ್ರಮಕ್ಕೂ ಮೊದಲು ವಿ.ಜಿ.ಕೊಪ್ಪಲು ಗ್ರಾಮದಿಂದ ನಂದಿಗೌಡನಕೊಪ್ಪಲು ಮಾರ್ಗವಾಗಿ ಅತ್ತಿಮರದಕೊಪ್ಪಲು ಗ್ರಾಮದವರೆಗೂ ಪೂರ್ಣಕುಂಭ ಕಳಸ, ವೀರಗಾಸೆ, ಕೀಲುಕುದುರೆ, ಡೊಳ್ಳುಕುಣಿತ ಹಾಗು ಮಂಗಳವಾದ್ಯಗಳೊಂದಿಗೆ ಪರಮಪೂಜ್ಯ ಶ್ರೀ ಪುರುಷೋತ್ತಮಾನಂದ ಪುರಿ ಸ್ವಾಮೀಜಿ ಅವರ ಭವ್ಯ ಮೆರವಣಿಗೆ ನಡೆಯಿತು. ಬಳಿಕ ನಡೆದ ಭಗೀರಥ ಮಹರ್ಷಿ ಅವರ ಕಂಚಿನ ಪ್ರತಿಮೆ ಅನಾವರಣಗೊಳಿಸಲಾಯಿತು.

# ಹೊಸ ಆನೆಧಾಮ ಸ್ಥಾಪನೆಗೆ ಸಿದ್ಧತೆ: ಶೀಘ್ರ ಪುಂಡಾನೆ ಸೆರೆ

## ಗೋವಾ-ಮಹಾರಾಷ್ಟ್ರ ಗಡಿಭಾಗಕ್ಕೆ ಕಾಡಾನೆ ಸ್ಥಳಾಂತರಕ್ಕೆ ಚಿಂತನೆ: ಅರಣ್ಯ ಸಚಿವ ಈಶ್ವರ್ ಖಂಡ್ರೆ

• ಪ್ರಜೋದಯ ವರದಿ

**ಬೇಲೂರು:** ರಾಜ್ಯದಲ್ಲಿ ಗಂಭೀರ ಸ್ವರೂಪ ಪಡೆದು ಕೊಳ್ಳುತ್ತಿರುವ ಮಾನವ-ಕಾಡಾನೆ ಸಂಘರ್ಷ ತಡೆಗೆ ಸರ್ಕಾರ ತುರ್ತು ಹಾಗು ಶಾಶ್ವತ ಕ್ರಮಗಳನ್ನು ಕೈಗೊಂಡಿದೆ. ಶೀಘ್ರದಲ್ಲೇ ಹೊಸ ಆನೆಧಾಮ ಸ್ಥಾಪನೆಗೆ ಪೂರ್ವ ಸಿದ್ಧತೆ ನಡೆಸಲಾಗುತ್ತಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ತಿಳಿಸಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅರಣ್ಯ ಪ್ರದೇಶ ಕ್ಷೀಣಿಸುತ್ತಿರುವುದರಿಂದ ಆನೆಗಳು ಕೃಷಿ ಜಮೀನು ಹಾಗು ಗ್ರಾಮಗಳತ್ತ ಬರುತ್ತಿರುವ ಘಟನೆಗಳು ಹೆಚ್ಚುತ್ತಿವೆ. ಈ ಹಿನ್ನಲೆ ಪುಂಡಾನೆಗಳನ್ನು ಸೆರೆ ಹಿಡಿದು ಸ್ಥಳಾಂತರಿಸುವ ಕಾರ್ಯ ಚುರುಕುಗೊಂಡಿದ್ದು, ಮುಂದಿನ ಹತ್ತು ದಿನಗಳಲ್ಲಿ ಹೊಸ ಆನೆ ಶಿಬಿರ ಆರಂಭಿಸಲಾಗುವುದೆಂದು ಹೇಳಿದರು.



ಜನರ ಜೀವ ಹಾಗು ರೈತರ ಬೆಳೆ ರಕ್ಷಣೆಗೆ ಸರ್ಕಾರ ಬಹುಮುಖ ಯೋಜನೆಗಳನ್ನು ಜಾರಿಗೊಳಿಸಿದೆ. ರಾಜ್ಯದಲ್ಲಿ ಆನೆಗಳ ಸಂಖ್ಯೆ 6,395ಕ್ಕೆ ಹಾಗು ಹುಲಿಗಳ ಸಂಖ್ಯೆ 563ಕ್ಕೆ ಏರಿಕೆಯಾಗಿದೆ. ಸುಮಾರು 20ರಿಂದ 22 ಆನೆಗಳನ್ನು ಗೋವಾ-ಮಹಾರಾಷ್ಟ್ರ ಗಡಿಭಾಗದ ಅರಣ್ಯ ಪ್ರದೇಶಗಳಿಗೆ ಸ್ಥಳಾಂತರಿಸುವ ಯೋಜನೆಯೂ ಸರ್ಕಾರದ ಮುಂದಿದೆ. ಆನೆಗಳ ಹಾವಳಿ ಹೆಚ್ಚಿರುವ ಪ್ರದೇಶಗಳಲ್ಲಿ ಸಾರ್ವಜನಿಕರು ಹೆಚ್ಚಿನ ಎಚ್ಚರಿಕೆ ವಹಿಸಬೇಕು. ವಿಶೇಷವಾಗಿ ಬೆಳಿಗ್ಗೆ 5 ರಿಂದ 7 ಗಂಟೆ ಹಾಗೂ ಸಂಜೆ 5ರಿಂದ 7 ಗಂಟೆಯವರೆಗೆ ಅನಗತ್ಯವಾಗಿ ಹೊರಗೆ ಸಂಚರಿಸಬಾರದು. ಈ ಅವಧಿಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಯಿಂದ ನಿರಂತರ ಗಸ್ತು ಹಾಗೂ ಕಣ್ಗಾವಲು ವ್ಯವಸ್ಥೆ ಮಾಡಲಾಗಿದೆ ಎಂದರು.

> ಪರಿಸರ ಸಂರಕ್ಷಣೆಗೆ ಬದುಕನ್ನೇ ಮುಡಿಪಾಗಿಟ್ಟ ಪರಿಸರ ಪ್ರೇಮಿಗಳ ಸೇವೆಯನ್ನು ಸ್ಮರಿಸುವ ಉದ್ದೇಶದಿಂದ 25 ಎಕರೆ ಭೂಮಿಯನ್ನು ಮೀಸಲಿಟ್ಟು 25 ಕೋ.ರೂ.ವೆಚ್ಚದಲ್ಲಿ ವಿಶೇಷ ಸ್ಮಾರಕ ಯೋಜನೆ ರೂಪಿಸಲಾಗಿದೆ.
> -ಈಶ್ವರ ಖಂಡ್ರೆ, ಅರಣ್ಯ ಸಚಿವ

ಮಾನವ-ಆನೆ ಸಂಘರ್ಷ ನಿಯಂತ್ರಣಕ್ಕಾಗಿ ರೈಲ್ವೆ ಬ್ಯಾರಿಕೇಡ್, ಟೆಂಟಕಲ್ ಫೆನ್ಸಿಂಗ್, ಆನೆ ತಡೆ ಕಂದಕ ನಿರ್ಮಾಣ ಸೇರಿ ಹಲವು ಶಾಶ್ವತ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಡ್ರೋನ್ ಕ್ಯಾಮರಾ ಹಾಗೂ ಥರ್ಮಲ್ ಇಮೇಜಿಂಗ್ ತಂತ್ರಜ್ಞಾನ ಬಳಸಿ ಆನೆಗಳ ಚಲನವಲನಗಳ ಮೇಲೆ ನಿಗಾ ಇಡಲಾಗುತ್ತಿದೆ. ಮಾನವ ಜೀವ ರಕ್ಷಣೆ ಸರ್ಕಾರದ ಅತ್ಯುನ್ನತ ಆದ್ಯತೆಯಾಗಿದ್ದು, ಮಾನವ- ವನ್ಯಜೀವಿ ಸಂಘರ್ಷ ತಡೆಗೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಮುಂದುವರಿಸಲಾಗುವುದೆಂದು ತಿಳಿಸಿದರು.

ಇಂಟಿಗ್ರೇಟೆಡ್ ಕಮಾಂಡ್ ಸೆಂಟರ್ ಹಾಗೂ ಆಂಟಿ-ಡಿಪ್ರೆಡೇಶನ್ ಕ್ಯಾಂಪ್‌ಗಳನ್ನು ಸ್ಥಾಪಿಸಿ, ತರಬೇತಿ ಪಡೆದ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ರೈತರ ಬೆಳೆ ಹಾನಿಗೆ ತಕ್ಷಣ ಪರಿಹಾರ ನೀಡಲು ಸರ್ಕಾರ ಬದ್ಧವಾಗಿದ್ದು, ರಾಜ್ಯಾದ್ಯಂತ 60 ಕೋ.ರೂ. ಬಿಡುಗಡೆ ಮಾಡಲಾಗಿದೆ. ಕಳೆದ ವರ್ಷದ ಎಲ್ಲಾ ಬಾಕಿ ಪರಿಹಾರ ವಿತರಣೆ ಪೂರ್ಣಗೊಂಡಿದ್ದು, ರೈತರು ತಿಂಗಳುಗಟ್ಟಲೆ ಕಾಯುವ ಪರಿಸ್ಥಿತಿ ಇಲ್ಲವಾಗಿದೆ ಎಂದು ಹೇಳಿದರು.

# ಶಾಯಿ ಬಟ್ಟೆ ಕಂಪನಿ ನೌಕರರ ಪ್ರತಿಭಟನೆ



• ಪ್ರಜೋದಯ ವರದಿ

**ಹಾಸನ:** ನಗರದ ಹೊರವಲಯದ ಹೊಳೆನರಸೀಪುರ ರಸ್ತೆಯಲ್ಲಿರುವ ಶಾಯಿ ಬಟ್ಟೆ ಕಂಪನಿಯ ಕಾರ್ಮಿಕರು ವೇತನ ಹೆಚ್ಚಳ, ಬೋನಸ್ ಹಾಗು ಮೂಲಭೂತ ಸೌಲಭ್ಯ ಒದಗಿಸುವಂತೆ ಆಗ್ರಹಿಸಿ ಶುಕ್ರವಾರ ದಿಢೀರ್ ಪ್ರತಿಭಟನೆ ನಡೆಸಿದರು.

ಬೆಳಿಗ್ಗೆ ಕೆಲಸಕ್ಕೆ ಆಗಮಿಸಿದ್ದ ಕಾರ್ಮಿಕರು ಏಕಾಏಕಿ ಕೆಲಸ ಸ್ಥಗಿತಗೊಳಿಸಿ ಕಂಪನಿ ಎದುರು ಆಡಳಿತ ಮಂಡಳಿಯ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಿಂದ ಕೆಲಕಾಲ ಕಂಪನಿಯ ಕಾರ್ಯಚಟುವಟಿಕೆ ಅಸ್ತವ್ಯಸ್ತಗೊಂಡು ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ಕಾರ್ಮಿಕ ಕುಮಾರ್ ಮಾತನಾಡಿ, ಕಳೆದ ಐದು ವರ್ಷಗಳಿಂದ ಸಂಬಳ ಹೆಚ್ಚಳ ಮಾಡುವ ಭರವಸೆ ನೀಡುತ್ತಿದ್ದರೂ ಕ್ರಮ

» ನಾಲ್ಕನೇ ಪುಟದಲ್ಲಿ

# ಸರ್ಕಾರದ ಯೋಜನೆಗಳ ಅನುಷ್ಠಾನಕ್ಕೆ ಮುತುವರ್ಜಿ ವಹಿಸಿ

• ಪ್ರಜೋದಯ ವರದಿ

**ಹಾಸನ :** ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳ್ಳುವ ಮೂಲಕ ನ್ಯಾಯಯುತವಾಗಿ ಜನರಿಗೆ ಸವಲತ್ತುಗಳನ್ನು ದೊರಕಿಸಲು ಮುತುವರ್ಜಿ ವಹಿಸುವಂತೆ ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ.ಎಂ.ರಾಮಪ್ಪ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಶುಕ್ರವಾರ ನಿಗಮದಿಂದ ಅನುಷ್ಠಾನವಾಗುತ್ತಿರುವ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಬೋವಿ ಅಭಿವೃದ್ಧಿ ನಿಗಮದಿಂದ ದೊರಕುವ ಸವಲತ್ತುಗಳ ಬಗ್ಗೆ ಹೆಚ್ಚಿನ ಪ್ರಚಾರ ಆಗಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕಾಳಜಿ ತೋರಬೇಕು. ಸರ್ಕಾರದ ಅನುದಾನ ವಾಪಸ್ ಹೋಗದಂತೆ ಕರ್ತವ್ಯ ನಿರ್ವಹಿಸುವುದರೊಂದಿಗೆ ಸಾಲ ಸೌಲಭ್ಯ ಒದಗಿಸಲು ಲೀಡ್ ಬ್ಯಾಂಕ್ ಅಧಿಕಾರಿಗಳು ಫಲಾನುಭವಿಗಳಿಂದ ಸಿಬಿಲ್ ಹಾಗೂ ಸೆಕ್ಯುರಿಟಿ ಕೇಳಬಾರದೆಂದು ನಿರ್ದೇಶನ ನೀಡಿದರು.



ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಕೊರೆಯಲು ಕ್ರಮ ವಹಿಸುವಂತೆ ಹಾಗೂ ಉದ್ಯಮ ಶೀಲತಾ ಯೋಜನೆಯಡಿ ಮಹಿಳಾ ಸ್ವಸಹಾಯ ಸಂಘಗಳನ್ನು ರಚನೆ ಮಾಡಿ ಸಾಲ ಸೌಲಭ್ಯಗಳನ್ನು ಒದಗಿಸುವ ಮೂಲಕ ಆರ್ಥಿಕ ಅಭಿವೃದ್ಧಿಗೆ ಅಧಿಕಾರಿಗಳು ಸಹಕರಿಸಬೇಕು. ಸ್ವಾವಲಂಬಿ ಸಾರಥಿ ಯೋಜನೆಯಡಿ ಫಾಸ್ಟ್ ಫುಡ್ ಹಾಗೂ ಟ್ರಕ್ ಟ್ರೈಲರ್, ಮೊಬೈಲ್ ಕಿಚನ್‌ಗೆ ಸಹಾಯ ಧನವನ್ನು ಒದಗಿಸಲು ಕ್ರಮವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಚಂದ್ರ ನಾಯಕ್ ಅವರು ಮಾತನಾಡಿ, ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ಯೋಜನೆಗಳ ಕುರಿತು ಸಮುದಾಯದವರಿಗೆ ಮಾಹಿತಿ ನೀಡುವುದರ ಜೊತೆಗೆ ಸವಲತ್ತುಗಳ ಬಳಕೆಗೆ ಪ್ರೇರೆಪಣೆ ನೀಡಬೇಕು. ಮೈಕ್ರೋ ಕ್ರೆಡಿಟ್ ಯೋಜನೆಯಡಿ ಒಮ್ಮೆ ಸಾಲ ಪಡೆದು ತೀರುವಳಿ ಮಾಡಿದರೆ ಪುನಃ ಐದು ಲಕ್ಷ ಸಾಲ ನೀಡಲಾಗುವುದು. ಈ ಸವಲತ್ತು ಬಳಸಿಕೊಂಡು ಆರ್ಥಿಕ ಸ್ಥಿತಿ ವೃದ್ಧಿಗೆ ಸಹಾಯವಾಗುತ್ತದೆ. ಫಲಾನುಭವಿಗಳ ಆಯ್ಕೆ ಮಾಡುವ ಸಂದರ್ಭದಲ್ಲಿ ಅಡಿಷನಲ್ ಲಿಸ್ಟ್ ತಯಾರಿ ಮಾಡಿಕೊಂಡು ಅರ್ಹರಿಗೆ ಅವಕಾಶ ಕಲ್ಪಿಸಬೇಕು. ಸಮುದಾಯದ ಜನರಿಗೆ ಸರ್ಕಾರದ ಸವಲತ್ತುಗಳು ತಲುಪಿಸಲು ಅಧಿಕಾರಿಗಳು ನಿಗಾವಹಿಸಬೇಕು ಎಂದರು.

» ನಾಲ್ಕನೇ ಪುಟದಲ್ಲಿ

# ಕ್ರಿಕೆಟ್ : ಜೆರ್ಸಿ, ಟ್ರೋಫಿ ಅನಾವರಣ






• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಶನಿವಾರ ಮತ್ತು ಭಾನುವಾರ ನಗರದ ಕಲಾ ಮತ್ತು ವಿಜ್ಞಾನ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿರುವ ಪತ್ರಕರ್ತರು- ಜನಪ್ರತಿನಿಧಿಗಳು ಹಾಗೂ ವಿವಿಧ ಇಲಾಖೆ ಅಧಿಕಾರಿಗಳ ಕ್ರಿಕೆಟ್ ಸಮ್ಮಿಲನ ಸೌಹಾರ್ದ ಪಂದ್ಯಾವಳಿ ಹಿನ್ನಲೆ ಶುಕ್ರವಾರ ಪತ್ರಕರ್ತರ ಸಂಘದ ಜೆರ್ಸಿ, ಟ್ರೋಫಿಯನ್ನು ಸಂಘದ ಸಭಾಂಗಣದಲ್ಲಿ ಅನಾವರಣ ಮಾಡಲಾಯಿತು. ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ. ಮದನಗೌಡ, ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ, ಉಪಾಧ್ಯಕ್ಷರಾದ ಎನ್.ನಂಜುಂಡೇಗೌಡ, ಜಿ.ಪ್ರಕಾಶ್, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಪಿ.ಎಸ್. ಪ್ರಮೋದ್, ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಕಾರ್ಯದರ್ಶಿ ಖುಷ್ವಂತ್ ಇದ್ದರು.

# ಪುರಸಭೆ ಸದಸ್ಯ ಅಶೋಕ್ ಅನರ್ಹತೆ ಆದೇಶಕ್ಕೆ ತಡೆ

• ಪ್ರಜೋದಯ ವರದಿ

**ಹಾಸನ:** ಬೇಲೂರು ಪುರಸಭೆ ಸದಸ್ಯ ಎ.ಆರ್.ಅಶೋಕ್ ಅವರನ್ನು ಅನರ್ಹಗೊಳಿಸಿ ಜಿಲ್ಲಾಧಿಕಾರಿ ನ್ಯಾಯಾಲಯ ನೀಡಿದ್ದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ. ಈ ಹಿನ್ನಲೆಯಲ್ಲಿ ಅಶೋಕ್ ಪುರಸಭಾ ಸದಸ್ಯರಾಗಿ ಮುಂದುವರಿಯಲಿದ್ದಾರೆ.



ಕೆಲ ಆಡಳಿತಾತ್ಮಕ ಹಾಗು ಕಾನೂನು ಸಂಬಂಧಿತ ವಿಚಾರಗಳ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ನ್ಯಾಯಾಲಯ ಅಶೋಕ್ ಅವರ ಸದಸ್ಯತ್ವ ಅನರ್ಹಗೊಳಿಸಿ ಆದೇಶ ಹೊರಡಿಸಿತ್ತು. ಈ ಆದೇಶ ಪ್ರಶ್ನಿಸಿ ಅಶೋಕ್ ಹೈಕೋರ್ಟ್ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ ಹೈಕೋರ್ಟ್, ಜಿಲ್ಲಾಧಿಕಾರಿ ಕೋರ್ಟ್ ನೀಡಿದ್ದ ಅನರ್ಹತೆ ಆದೇಶಕ್ಕೆ ತಾತ್ಕಾಲಿಕ ತಡೆ ನೀಡಿ ಮುಂದಿನ ವಿಚಾರಣೆವರೆಗೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸೂಚಿಸಿದೆ. ಹೈಕೋರ್ಟ್ ಆದೇಶ ಬಂದ ನಂತರ ಅಶೋಕ್ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಅಶೋಕ್ ಅವರು ಮಾತನಾಡಿ, ಕಾನೂನು ಹೋರಾಟದಲ್ಲಿ ನನಗೆ ಜಯ ಸಿಕ್ಕಿದೆ. ಮಾಜಿ ಸಚಿವ ಬಿ.ಶಿವರಾಂ ಬಣಕ್ಕೆ, ತಮ್ಮ ವಿರುದ್ಧ ರಾಜಕೀಯ ಪಿತೂರಿ ನಡೆಸಿದವರಿಗೆ ಮುಖಭಂಗವಾಗಿದೆ. ನನ್ನ ವಿರುದ್ಧ ಎಷ್ಟೇ ಪ್ರಕರಣ ಹಾಕಿದರೂ ಸತ್ಯಕ್ಕೆ ಬೆಲೆ ಇರುತ್ತದೆ. ನಾನು ಉತ್ತಮ ಕೆಲಸ ಮಾಡಿಕೊಂಡು ಬಂದಿದ್ದೇನೆ. ಮುಂದೆಯೂ ಅದೇ ರೀತಿಯಲ್ಲಿ ಸಾರ್ವಜನಿಕ ಸೇವೆ ಮುಂದುವರಿಸುತ್ತೇನೆಂದು ಹೇಳಿದರು.

## ಮಾನವೀಯ ಮೌಲ್ಯಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಿ: ಈಶ್ವರ ಖಂಡ್ರೆ

# ಸಮಾನತೆ, ಸ್ವಾತಂತ್ರ್ಯ, ಕಾಯಕ ಬಸವಣ್ಣನ ಕನಸು

• ಪ್ರಜೋದಯ ವರದಿ

**ಬೇಲೂರು:** ವಿಶ್ವಗುರು ಜಗಜ್ಯೋತಿ ಬಸವಣ್ಣನವರು ಆದರ್ಶ ಪುರುಷರಾಗಿದ್ದು, ಅವರ ಸಮಾನತೆ, ಕಾಯಕ, ದಾಸೋಹ ಹಾಗು ಮಾನವೀಯ ಮೌಲ್ಯಗಳನ್ನು ಪ್ರತಿಯೊಬ್ಬ ವೀರಶೈವರು-ಲಿಂಗಾಯಿತರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಹೇಳಿದರು.

ಪಟ್ಟಣದ ವೀರಶೈವ ಸಮುದಾಯ ಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ತಾಲ್ಲೂಕು ಘಟಕ, ಯುವ-ಮಹಿಳಾ ಘಟಕದಿಂದ ಆಯೋಜಿಸಿದ್ದ ಜಗಜ್ಯೋತಿ ಬಸವೇಶ್ವರರ ಜಯಂತಿ ಮಹೋತ್ಸವ ಹಾಗು ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಾಪುರುಷರ ಜಯಂತಿಗಳನ್ನು ಆಚರಿಸುವ ಉದ್ದೇಶ ಅವರ ಆದರ್ಶ, ತತ್ವ ಹಾಗು ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಅರಿತು ಜೀವನದಲ್ಲಿ ಅಳವಡಿಸಿಕೊಳ್ಳುವುದಾಗಿದೆ ಎಂದರು.



893 ವರ್ಷಗಳ ಹಿಂದೆ ಸಮಾಜದಲ್ಲಿ ಅಸಮಾನತೆ, ಜಾತೀಯತೆ ಹಾಗು ಅನ್ಯಾಯ ಹೆಚ್ಚಿದ್ದ ಸಂದರ್ಭದಲ್ಲಿ ಬಸವಣ್ಣನವರು ಬಸವಕಲ್ಯಾಣದಲ್ಲಿ ಮಹಾ ಸಾಮಾಜಿಕ ಕ್ರಾಂತಿ ನಡೆಸಿದರು. ಸಮಾನತೆ, ಸ್ವಾತಂತ್ರ್ಯ, ಕಾಯಕ, ದಾಸೋಹ, ಸೋದರತ್ವ ಹಾಗು ಸಹಬಾಳ್ವೆಯ ತತ್ವಗಳ ಆಧಾರದಲ್ಲಿ ವರ್ಣರಹಿತ, ವರ್ಗರಹಿತ ಸಮಾಜ ನಿರ್ಮಾಣವೇ ಬಸವಣ್ಣನವರ ಕನಸಾಗಿತ್ತು. ಜಾತೀಯತೆ, ಅಸ್ಪೃಶ್ಯತೆ ಹಾಗು ಕಂದಾಚಾರದ ವಿರುದ್ಧ ಅವರು ಹೋರಾಟ ನಡೆಸಿದರೆಂದು ತಿಳಿಸಿದರು.

ಅನುಭವ ಮಂಟಪವನ್ನು ಜಗತ್ತಿನ ಪ್ರಥಮ ಪ್ರಜಾಪ್ರಭುತ್ವ ಸಂಸತ್ತು ಎಂದು ಬಣ್ಣಿಸಿದ ಸಚಿವರು, ಎಲ್ಲಾ ಸಮುದಾಯ ಹಾಗೂ ವೃತ್ತಿಯ ಶರಣರಿಗೆ ಅವಕಾಶ ನೀಡುವ ಮೂಲಕ ಬಸವಣ್ಣನವರು ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಶತಮಾನಗಳ ಹಿಂದೆಯೇ ಜಾರಿಗೆ ತಂದಿದ್ದರು. ಇಂದಿನ ಕಾಲಘಟ್ಟದಲ್ಲಿ ವಿಜ್ಞಾನ, ತಂತ್ರಜ್ಞಾನ ಹಾಗು ಆರ್ಥಿಕವಾಗಿ ಸಮಾಜ ಮುಂದುವರೆದಿದ್ದರೂ ಅಸೂಯೆ, ದ್ವೇಷ, ಹಿಂಸೆ, ವರ್ಣಭೇದ ಹಾಗೂ ಲಿಂಗಭೇದ ಇನ್ನೂ ಮುಂದುವರಿದಿರುವುದು ವಿಷಾದನೀಯವೆಂದು ಅಭಿಪ್ರಾಯ ಪಟ್ಟರು.

ಶಾಸಕ ಹೆಚ್.ಕೆ.ಸುರೇಶ್ ಅವರು ಮಾತನಾಡಿ, ಜಗತ್ತಿನ ಮೊದಲ ಪ್ರಜಾಪ್ರಭುತ್ವ ಸಂಸತ್ತಾದ ಅನುಭವ ಮಂಟಪವನ್ನು ಸ್ಥಾಪಿಸಿ ಸಮಾನತೆ ಹಾಗೂ ನ್ಯಾಯದ ಚಿಂತನೆ ಬೆಳೆಸಿದ

» ನಾಲ್ಕನೇ ಪುಟದಲ್ಲಿ

# ಮೇ 11 ರಂದು ಬುಡಕಟ್ಟುಗಳ ಆಯೋಗದ ಅಧ್ಯಕ್ಷ-ಸದಸ್ಯರ ಪ್ರವಾಸ

• ಪ್ರಜೋದಯ ವರದಿ

**ಹಾಸನ :** ರಾಜ್ಯ ಅನುಸೂಚಿತ ಜಾತಿ ಗಳು ಮತ್ತು ಅನುಸೂಚಿತ ಬುಡಕಟ್ಟು ಗಳ ಆಯೋಗದ ಅಧ್ಯಕ್ಷ ಡಾ.ಎಲ್.ಮೂರ್ತಿ ಹಾಗೂ ಸದಸ್ಯರಾದ ಎಂ.ಕುಂಬಯ್ಯ, ಸುನೀಲ್ ಎಂ ಉಕ್ಕಲಿ, ಎನ್.ದಿವಾಕರ್, ಗೀತಾ ಥಾಂವಶಿ ಹಾಗೂ ಕಾರ್ಯದರ್ಶಿ ಡಾ.ಹೆಚ್.ಎಸ್.ಶಿವರಾಮು ಅವರು ಮೇ 11 ರಂದು ಜಿಲ್ಲಾ ಪ್ರವಾಸ ಮಾಡಲಿದ್ದಾರೆ.

ಅಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿ, ಪೊಲೀಸ್ ಅಧೀಕ್ಷಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಂಘ ಸಂಸ್ಥೆಯ ಪದಾಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಮಧ್ಯಾಹ್ನ 2.15ಕ್ಕೆ ಪತ್ರಿಕಾ ಗೋಷ್ಠಿ ನಡೆಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಗಳ ಅಧಿ ಕಾರಿಗಳೊಂದಿಗೆ ಎಸ್‌ಸಿಪಿ, ಟಿಎಸ್‌ಪಿ ಪ್ರಗತಿ ಪರಿಶೀಲನಾ ಸಭೆಯನ್ನು ಜಿ. ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ನಡೆಸಲಿದ್ದಾರೆ.

CMYK CMYK CMYK CMYK

# ಮಕ್ಕಳು ಹೆತ್ತವರ ಮುಂದೆ ಏಕೆ ಸುಳ್ಳು ಹೇಳುತ್ತಾರೆ?



ಮಕ್ಕಳೇಕೆ ಸುಳ್ಳು ಹೇಳುತ್ತಾರೆ? ಈ ಲೇಖನಕ್ಕೆ ಹೀಗೊಂದು ಹೆಡಿಂಗ್ ಕೊಟ್ಟ ಮರುಕ್ಷಣ ನನಗೆ ಈ ಪ್ರಶ್ನೆಯೇ ಬಹಳ ವಿಚಿತ್ರವೆನಿಸುತ್ತಿದೆ. ಏಕೆಂದರೆ ಭೂಮಿಯ ಮೇಲಿನ ಎಲ್ಲರೂ ಸುಳ್ಳು ಹೇಳುತ್ತಾರೆ. ಹಾಗಿರುವಾಗ ಇದೆಂತಹ ಪ್ರಶ್ನೆ? ಆದರೂ ದೊಡ್ಡವರಾದ ನಮಗೆ ಇದಕ್ಕೆ ಉತ್ತರ ಬೇಕಿದೆ. ಮಕ್ಕಳೇಕೆ ಸುಳ್ಳು ಹೇಳುತ್ತಾರೆ? ನಾನಾಗ ಪಿಯುಸಿ ಎರಡನೇ ವರ್ಷ. ವರ್ಷದ ಕ್ಲಾಸುಗಳೆಲ್ಲ ಮುಗಿದಿದ್ದವು. ಕಾಲೇಜಿನಲ್ಲಿ ವಾರ್ಷಿಕ ಪರೀಕ್ಷೆಗಿಂತ ಮೊದಲು ಪ್ರಿಪರೇಟರಿ (ಪೂರ್ವ ತಯಾರಿ) ಪರೀಕ್ಷೆ ಇತ್ತು.

ಆ ಪರೀಕ್ಷೆ ಕಾಲಹರಣ ಎಂದೇ ನನಗಿದ್ದ ಗಟ್ಟಿ ನಿಲುವು. ವಾರ್ಷಿಕ ಪರೀಕ್ಷೆ ತಯಾರಿ ಹೇಗಿದೆ ಎಂದು ತಿಳಿಯುವ ಉದ್ದೇಶಕ್ಕೇ ಆದರೂ, ಅದರ ಫಲಿತಾಂಶಕ್ಕೆ ಯಾವುದೇ ಪರಿಣಾಮದ ಮಹತ್ವ ಇರಲಿಲ್ಲ. ಪ್ರತಿಫಲವಿಲ್ಲದ ಕೆಲಸ ಎಂದೆನಿಸುತ್ತಿತ್ತು. ಆದರೆ ಪ್ರಿಪರೇಟರಿ ಪರೀಕ್ಷೆ ತಪ್ಪಿಸಿಕೊಳ್ಳುವಂತಿರಲಿಲ್ಲ.

ತಪ್ಪಿಸಿಕೊಂಡರೆ ವಾರ್ಷಿಕ ಪರೀಕ್ಷೆಗೆ ಹಾಲ್ ಟಿಕೆಟ್ ಕೊಡುವುದಿಲ್ಲ ಎಂದು ಪ್ರಾಂಶುಪಾಲರು ಕ್ಲಾಸಿಗೆ ಬಂದು ಹೆದರಿಸಿದ್ದರು. ಹಾಗಾಗಿ ಪರೀಕ್ಷೆಗೆ ಹೋಗುವುದು ಅನಿವಾರ್ಯವಾಗಿತ್ತು. ಆದರೆ ಉತ್ತರ ಪತ್ರಿಕೆಯಲ್ಲಿ ಏನು ಮತ್ತು ಎಷ್ಟು ಉತ್ತರ ಬರೆಯಬೇಕು ಎನ್ನುವುದು ನಮ್ಮ ಕೈಲಿದೆಯಲ್ಲ!

ಪಾಸ್ ಆಗಲು ಎಷ್ಟು ಬೇಕೋ ಅಷ್ಟೇ - ನಲವತ್ತು ಮಾರ್ಕ್ಸಿಗೆ ಆಗುವಷ್ಟು ಬರೆದು ಬರುವುದು ಎಂದು ಸ್ನೇಹಿತರೆಲ್ಲ ಮಾತನಾಡಿಕೊಂಡೆವು. ಪ್ರಿಪರೇಟರಿ ಪರೀಕ್ಷೆ ಒತ್ತಾಯಕ್ಕೆ ಹೀಗೊಂದು ಪ್ರತಿಭಟನೆ. ಉತ್ತರಗಳು ನಲವತ್ತು ಮಾರ್ಕ್ಸ್ ದಾಟುತ್ತಿದ್ದಂತೆ ಪೇಪರ್ ಮರಳಿ ಕೊಟ್ಟು, ಸ್ನೇಹಿತರೆಲ್ಲ ಸೇರಿ ಕ್ರಿಕೆಟ್ ಆಡಲು ಹೊರಟು ಬಿಡುತ್ತಿದ್ದೆವು.

ಪ್ರಿಪರೇಟರಿ ಪರೀಕ್ಷೆ ಮುಗಿಯಿತು. ವಾರ್ಷಿಕ ಪರೀಕ್ಷೆಗೆ ಓದಿಕೊಳ್ಳಲು ಬಿಡುವು. ಆ ವೇಳೆ ಕಾಲೇಜಿನಲ್ಲಿ ಉಳಿದ ಡಿಗ್ರಿ, ಬ್ಯಾಕ್ ಲಾಗ್ ಪರೀಕ್ಷೆಗಳು ನಡೆಯುತ್ತಿದ್ದವು. ನನ್ನ ತಂದೆ ಅದೇ ತಾಲೂಕಿನ ಇನ್ನೊಂದು ಕಾಲೇಜಿನಲ್ಲಿ ಪ್ರಾಧ್ಯಾಪಕರು. ಅವರಿಗೆ ಸ್ಕ್ವಾಡ್ ಡ್ಯೂಟಿ - ಜಿಲ್ಲೆಯ ಪರೀಕ್ಷಾ ಮೇಲ್ವಿಚಾರಣೆಯ ಜವಾಬ್ದಾರಿ ಆ ವರ್ಷ.

ಸರಕಾರೀ ಜೀಪು ಹತ್ತಿ ಜಿಲ್ಲೆಯ ಬೇರೆ ಬೇರೆ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕಿತ್ತು. ಅಂತೆಯೇ ಅವರ ಸ್ಕ್ವಾಡ್ ಡ್ಯೂಟಿಯ ಅಶ್ವಮೇಧದ ಜೀಪು ನಮ್ಮ ಕಾಲೇಜಿಗೂ ಬಂದೇಬಿಟ್ಟಿತು. ಅಲ್ಲಿಯವರೆಗೆ ನಾನೆಂದೂ ಪ್ರಾಧ್ಯಾಪಕರ ಮಗ ಎನ್ನುವ ಗುಟ್ಟು ಯಾರಲ್ಲೂ ಬಿಟ್ಟು ಕೊಟ್ಟಿರಲಿಲ್ಲ. ಎಲ್ಲ ಮಾಸ್ತರ್ ಮಕ್ಕಳಂತೆ ನಾನು ಕೂಡ ಈ ವಿಷಯವನ್ನು ಶಾಲೆ, ಕಾಲೇಜಿನಲ್ಲಿ ಗೌಪ್ಯವಾಗಿಟ್ಟರೇ ಒಳ್ಳೆಯದೆಂದು ಪಾಲಿಸಿಕೊಂಡು ಬಂದಿದ್ದೆ.

ನಮ್ಮ ಕಿತಾಪತಿ, ಹುಡುಗಾಟಿಕೆಯ ಕೆಲಸಗಳಿಗೆ ಪಿತ್ರಾರ್ಜಿತ ಗೌರವ ತಡೆಯಾಗಬಾರದಲ್ಲ. ಅಪ್ಪ ಆ ದಿನ ಕಾಲೇಜಿಗೆ ಬಂದವರು ನನ್ನ ಮಗ ಇಲ್ಲಿಯೇ ಕಲಿಯುವುದು, ಈ ಹೆಸರು ಎಂದಿರಬೇಕು. ನಮ್ಮ ಪ್ರಾಂಶುಪಾಲರು ಕಾಲೇಜಿನ ಎಲ್ಲಾ ಎಕ್ಸ್ಟ್ರಾ ಕರಿಕ್ಯುಲಂ ಪಟ್ಟಿಯಲ್ಲಿ ಇರುತ್ತಿದ್ದ ಹೆಸರನ್ನು ತಕ್ಷಣ ಗುರುತಿಸಿಬಿಟ್ಟರು. ಅಷ್ಟೇ ಆಗಿ ಸುಮ್ಮನಿದ್ದರೆ ಮುಗಿಯುತ್ತಿತ್ತು. ಬದಲಿಗೆ ಎಲ್ಲಿಲ್ಲದ ಹುರುಪಿನಿಂದ ನನ್ನ ಪ್ರಿಪರೇಟರಿ ಪರೀಕ್ಷೆಯ ಫಲಿತಾಂಶದ ಅಂಕಪಟ್ಟಿಯನ್ನು ಅಪ್ಪನ ಕೈಗೆ ಕೊಟ್ಟುಬಿಟ್ಟರು. ಅಲ್ಲಿ ನೋಡಿದರೆ ಒಂದಿಷ್ಟು 35, ಇನ್ನೊಂದಿಷ್ಟು 40. ಯಾವುದೂ ಅರ್ಧಶತಕ ದಾಟಿರಲಿಲ್ಲ!

ಅಪ್ಪ ಮನೆಗೆ ಬಂದವರೇ ನನ್ನನ್ನು ಕರೆದರು. ಪರೀಕ್ಷೆ ತಯಾರಿ ಹೇಗೆ ನಡೆಯುತ್ತಿದೆ? ಎಂದು ಕೇಳಿದರು. ಚೆನ್ನಾಗಿ ನಡೆಯುತ್ತಿದೆ ಎಂದೆ. ಎಷ್ಟು ಮಾರ್ಕ್ಸ್ ಬರಬಹುದು? ನಾನು ಉತ್ತರಿಸಲಿಲ್ಲ. ಪ್ರಿಪರೇಟರಿ ಪರೀಕ್ಷೆ ಪ್ರಕಾರ? ಡಿಸ್ಟಿಂಕ್ಷನ್ ಬರಬಹುದಾ? ಎಂದು ಕೇಳಿದರು. ಏನೋ ಸ್ವಲ್ಪ ಉಲ್ಟಾ ಹೊಡೆಯುತ್ತಿದೆಯಲ್ಲ ಎಂದೆನಿಸಿತು.

ಹೌದು, ಆ ದಿನವೇ ಹೇಳಿದೆನಲ್ಲ, ಪ್ರಿಪರೇಟರಿ ಪರೀಕ್ಷೆ ಚೆನ್ನಾಗಿ ಮಾಡಿದ್ದೇನೆ ಎಂದು. ಇವತ್ತು ಸ್ಕ್ವಾಡ್ ಡ್ಯೂಟಿ - ನಿನ್ನ ಕಾಲೇಜಿಗೆ ಹೋಗಿದ್ದೆ ಎಂದರು. ಚಿಕ್ಕ ಚೀಟಿಯನ್ನು ಮೇಜಿನ ಮೇಲಿಟ್ಟರು. ಅದರಲ್ಲಿ ಪ್ರಿನ್ಸಿಪಾಲರು ಬರೆದುಕೊಟ್ಟ ನನ್ನ ಮಾರ್ಕ್ಸ್‌ಗಳಿದ್ದವು!

ಪ್ರಿಪರೇಟರಿ ಪರೀಕ್ಷೆಯೆಂಬ ಒತ್ತಾಯಕ್ಕೆ ಮಾಡಿದ ಪ್ರತಿಭಟನೆ ಹೀಗೊಂದು ರೂಪ ತಾಳಿ ಬಿಡುತ್ತದೆ ಎಂಬ ಅಂದಾಜಿರಲಿಲ್ಲ. ಅಪ್ಪ ಹೇಳಿದರು - ನನಗೆ ಮಾರ್ಕ್ಸ್ ಬಗ್ಗೆ ಚಿಂತೆಯಿಲ್ಲ. ಆದರೆ ನಾನು ನನ್ನ ಮಗನನ್ನು ಸುಳ್ಳು ಹೇಳುವಂತೆ ಬೆಳೆಸಿದೆನಲ್ಲ. ನಾನು ತಪ್ಪಿಲ್ಲಿ ಎಂದು ಯೋಚಿಸ ಬೇಕಾಗಿದೆ.. ಅವರು ಮತ್ತಿನ್ನೇನೂ ಮಾತಾಡಲಿಲ್ಲ. ಅವರು ಆಮೇಲೆ ಏನು ಯೋಚಿಸಿದರೋ ಗೊತ್ತಿಲ್ಲ. ಆದರೆ ಆ ದಿನ ನಾನು ಮಾತ್ರ ಸಾವಿರ ಬಾರಿ ನಾನೇಕೆ ಸುಳ್ಳು ಹೇಳಿದೆ ಎಂದು ಪ್ರಶ್ನಿಸಿಕೊಂಡೆ.

ಹೌದು, ನಾನು ಆ ದಿನ ಏಕೆ ಸುಳ್ಳು ಹೇಳಿದೆ? ಇಷ್ಟು ದಿನ ಏನೇನೋ ಸುಳ್ಳು ಹೇಳಿದೆನಲ್ಲ. ಏಕೆ? ಮಕ್ಕಳೇಕೆ ಸುಳ್ಳು ಹೇಳುತ್ತಾರೆ? ಮನೆಯ ಏನೋ ಒಂದು ವಸ್ತು ಹಾಳಾಗಿರುತ್ತದೆ, ಗ್ಲಾಸಿನ ವಸ್ತು ಒಡೆದುಹೋಗಿರುತ್ತದೆ. ಅಮ್ಮ ನೀನು ಮಾಡಿ? ಎಂದು ಗದರಿಸುತ್ತಾಳೆ.

ಇಲ್ಲ, ನಾನಲ್ಲ ಮಾಡಿದ್ದು ಎನ್ನುವಾಗ ಮಗುವಿನೊಳಗೆ ಮೂಡುವ ಗೊಂದಲದಿಂದ ಕಣ್ಣು ಕೆಳ ಅಡ್ಡ ಸರಿಯುತ್ತದೆ. ತಕ್ಷಣ ಅಮ್ಮನಿಗೆ ಸುಳ್ಳು ತಿಳಿದುಬಿಡುತ್ತದೆ. ಅಪ್ಪ, ಅಮ್ಮ ಯಾರೇ ಇರಲಿ, ಮಕ್ಕಳ ಸುಳ್ಳನ್ನು ಮಾತ್ರ ಸಹಿಸುವುದಿಲ್ಲ. ತಾವು ಹೇಗೇ ಇರಲಿ, ಎಷ್ಟೇ ಸುಳ್ಳು ಹೇಳಲಿ, ಮಕ್ಕಳು ಮಾತ್ರ ಸತ್ಯಹರಿಶ್ಚಂದ್ರರಾಗಬೇಕು. ಕೋಟೆ ಲೂಟಿ ಮಾಡುವ ರಾಜಕಾರಣಿಗೂ ಮಗನ ಮೊದಲ ಸುಳ್ಳು ತೀವ್ರವಾಗಿಯೇ ಬಾಧಿಸುತ್ತದೆ!

ಸುಳ್ಳು ಎಂದರೆ ಮೋಸ, ಅಪ್ರಾಮಾಣಿಕತನ ಇತ್ಯಾದಿ. ಸರಿ. ಆದರೆ ಒಂದು ಪ್ರಶ್ನೆ. ದೊಡ್ಡವರು ಹೇಳುವ ಸುಳ್ಳು ಮತ್ತು ಚಿಕ್ಕ ಮಕ್ಕಳು ಹೇಳುವ ಸುಳ್ಳು ಎರಡೂ ಒಂದೇ ತೂಕದ್ದೇ? ದೊಡ್ಡವರ ಪ್ರಪಂಚದಲ್ಲಿ ಸುಳ್ಳೆಂದರೆ ಉದ್ದೇಶವಿಟ್ಟು ಮಾಡಿದ ನಿರ್ಧಾರ. ಹೆಚ್ಚಾಗಿ ಪೂರ್ವ ಯೋಜಿತ ಅಥವಾ ಎದುರಿಗಿರುವವರನ್ನು ದಾರಿತಪ್ಪಿಸಲು ಆಯ್ದುಕೊಂಡ ಮಾರ್ಗ. ಆದರೆ ಮಕ್ಕಳಲ್ಲಿ? ಇದನ್ನು ಮಾಡಿದ್ದು ನೀನು ಹೌದಾ? ಎಂದು ಕೇಳಿದಾಗ ಮಕ್ಕಳಲ್ಲಿ ದೊಡ್ಡವರಷ್ಟು ಮುಂದಿನ ಪರಿಣಾಮವನ್ನು ಗ್ರಹಿಸುವ ಚಾಲಾಕಿತನ ಬೆಳೆದಿರುವುದಿಲ್ಲ.

ಇಂತಹ ಪ್ರಶ್ನೆ ಎದುರಾದಾಗ ಅವರಲ್ಲಿ ಮೂಡುವ ಪ್ರಶ್ನೆಗಳೇ ಬೇರೆ. ಈಗ ನಾನು ಬೈಸಿಕೊಳ್ಳ ಬೇಕಾಗುತ್ತದೆಯೇ? ಸತ್ಯ ಹೇಳಿದರೆ ಪ್ರೀತಿಸುವ ಅಪ್ಪ ಅಮ್ಮನ ಕೋಪಕ್ಕೆ ಕಾರಣವಾಗಬಹುದೇ? ಅವರ ಕಣ್ಣಲ್ಲಿ ಕೆಟ್ಟವನಾಗಿ ಕಾಣಿಸಿಬಿಡುತ್ತೇನೆಯೇ? ಆಗ ಅವರ ಮನಸ್ಸು ಲಭ್ಯವಿರುವ, ಅತ್ಯಂತ ವೇಗದಲ್ಲಿ ಸನ್ನಿವೇಶದಿಂದ ತಪ್ಪಿಸಿಕೊಳ್ಳುವ ಸಾಧ್ಯತೆಯನ್ನು ಹುಡುಕುತ್ತದೆ.

ಎಲ್ಲರಿಗೂ ಪ್ರಾಮಾಣಿಕತೆಗಿಂತ ಉಳಿವಿನ ಪ್ರಶ್ನೆ ಯಾವತ್ತೂ ದೊಡ್ಡದು. ಸತ್ಯ ಹೇಳಿದರೆ ಮುಂದಿನ ಸನ್ನಿವೇಶ, ಆಗಬಹುದಾದ ಪರಿಣಾಮ ಮಕ್ಕಳಿಗೆ ಅಂದಾಜಿಸಲು ಬರುವುದಿಲ್ಲ. ಪರಿಣಾಮ ಸುಳ್ಳು ಸರಿಯಾದ ಆಯ್ಕೆಯೆನಿಸುತ್ತದೆ. ಪ್ರಾಮಾಣಿಕತೆ ಮತ್ತು ಸುಳ್ಳು - ನಮ್ಮ ಪ್ರಕಾರ ಎರಡು ವಿರುದ್ಧ ಧ್ರುವಗಳು. ಆದರೆ ಬೆಳೆಯುವ, ಜೀವನ ಕಲಿಯುವ ಪ್ರಕ್ರಿಯೆಯಲ್ಲಿ ಅವೆರಡು ಒಂದೇ ಸಬ್ಜೆಕ್ಟಿನ ಎರಡು ಪಾಠಗಳು.

ಸುಳ್ಳು ಹೇಳಬೇಕೆಂದರೆ ಮಗುವಿಗೆ ಮೊದಲು ಉಳಿದವರಲ್ಲಿ ಮನಸ್ಸು, ಯೋಚನೆಗಳಿವೆ ಎನ್ನುವುದು ತಿಳಿಯಬೇಕು. ನಾನು ಇನ್ನೊಬ್ಬರ ಮನಸ್ಸಿನ ಮೇಲೆ ಪ್ರಭಾವ ಬೀರಬಹುದು, ಅದನ್ನು ಮನಿಪ್ಯುಲೇಟ್ ಮಾಡಬಹುದು ಎನ್ನುವುದು ಅರ್ಥವಾದಾಗ ಮಾತ್ರ ಮಗುವಿಗೆ ಸುಳ್ಳೊಂದು ಎಸ್ಕೇಪ್ - ಪಾರಾಗುವ ಮಾರ್ಗ ಎನ್ನುವ ತಿಳುವಳಿಕೆ ಬರುವುದು.

ಮೊದಲ ಸುಳ್ಳುಗಳು ಮಗುವಿನ ಆ ಪ್ರಯೋಗ. ಆದರೆ ಅದನ್ನು ಕ್ಷಣಮಾತ್ರದಲ್ಲಿ ಕಂಡು ಹಿಡಿಯುವ ಪಾಲಕರಾದ ನಾವು ಅವರ ಜೊತೆ ಸ್ಪರ್ಧೆಗಿಳಿದುಬಿಡುತ್ತೇವೆ. ನೀನು ಸುಳ್ಳು ಹೇಳಿದರೆ ನನಗೆ ಗೊತ್ತಾಗಿ ಬಿಡುತ್ತದೆ, ಹಾಗಾಗಿ ಇನ್ನು ಮುಂದೆ ಸುಳ್ಳು ಹೇಳಬೇಡ ಎಂದು ಗದರಿಸುತ್ತೇವೆ. ಸುಳ್ಳನ್ನು ಕಂಡುಹಿಡಿದ ನಮ್ಮ ಬುದ್ಧಿವಂತಿಕೆಯನ್ನು ಅವರೆದುರು ಕುಹಕ ಸಂಭ್ರಮಿಸುತ್ತೇವೆ.

ಮೇಜಿನ ಮೇಲಿಟ್ಟ ಚಾಕಲೇಟ್ ಮಾಯವಾದಾಗ, ನಾನು ತಿಂದಿಲ್ಲವೆನ್ನುವ ಮಗುವಿನ ಮುಗ್ಧ ಸುಳ್ಳು ಅರಿವಿನ ಬೆಳವಣಿಗೆಯ ಮೊದಲ ಲಕ್ಷಣ. ಮಕ್ಕಳು ಸ್ವಲ್ಪ ದೊಡ್ಡವರಾಗುತ್ತಿದ್ದಂತೆ ತಮ್ಮ ತಪ್ಪುಗಳನ್ನು ಗೌಪ್ಯ ಮಾಡುತ್ತಾರೆ. ದೊಡ್ಡವರಾದ ನಾವು ಸುಳ್ಳನ್ನೇ ಹೇಳುವುದಿಲ್ಲ ಎಂದರೂ ಸತ್ಯವನ್ನೇ ಇನ್ನಷ್ಟು ಮೃದುಮಾಡಿ ಹೇಳುತ್ತೇವೆ. ಕಷ್ಟವೆನಿಸುವ ಮಾತುಕತೆಯನ್ನು ಏನೋ ಒಂದು ಪೋಕ್ಲಾಟ್ ಸುಳ್ಳನ್ನು ಹೇಳಿ ತಪ್ಪಿಸಿಕೊಳ್ಳುತ್ತೇವೆ. ಸನ್ನಿವೇಶಗಳಲ್ಲಿ ವಾಕ್ಯವನ್ನು ಯೋಚಿಸಿ, ತೂಗಿ ಪ್ರಯೋಗಿಸುತ್ತೇವೆ.

ಮಕ್ಕಳು ಮಾಡುವುದೂ ಅದನ್ನೇ. ಆದರೆ ಮಕ್ಕಳದ್ದು ಪರಿಷ್ಕೃತವಲ್ಲದ, ಯೋಜಿತವಲ್ಲದ ಸುಳ್ಳು. ಅಪರಿಷ್ಕೃತ, ಬಾಲಿಶ. ಹಾಗಾಗಿಯೇ ಮುಗ್ಧ. ಮಕ್ಕಳ ಸುಳ್ಳನ್ನು ಅಲಕ್ಷಿಸುವುದು, ನಿರ್ಲಕ್ಷಿಸುವುದು ಕೂಡ ಪರಿಹಾರವಲ್ಲ. ಸುಳ್ಳು ಸಿಕ್ಕಿಬಿದ್ದ ಸನ್ನಿವೇಶದಲ್ಲಿ - ಪಾಲಕರು ಹೇಳಿದ ಮೌಲ್ಯಗಳನ್ನಷ್ಟೇ ಮಕ್ಕಳು ಕೇಳುವುದಿಲ್ಲ. ಜೊತೆಯಲ್ಲಿ ನಾನು ಏನನ್ನು ಹೇಳಿದರೆ ಏನಾಗುತ್ತದೆ? ಯಾವ ರೀತಿ, ಹೇಗೆ ಹೇಳಿದರೆ ಯಾವುದಕ್ಕೆ ಯಾವ ಪರಿಣಾಮ? ಎನ್ನುವುದನ್ನು ಮಕ್ಕಳು ಆಗಲೇ ಕಲಿಯುವುದು. ಸತ್ಯಕ್ಕೆ ಸಿಟ್ಟು, ಅವಮಾನ, ಕಠಿಣ ಶಿಸ್ತುಕ್ರಮ ಎದುರಾದಾಗ ಪ್ರಾಮಾಣಿಕತನ ಎಂದರೆ ಅಪಾಯ ಎಂಬುದು ಸಮೀಕರಣ.

ಒಮ್ಮೆ ಕಲಿತ ಈ ಸಮೀಕರಣ ಅಷ್ಟು ಸುಲಭದಲ್ಲಿ ಮಕ್ಕಳು ಮರೆಯುವುದಿಲ್ಲ. ಮಕ್ಕಳು ಸುಳ್ಳು ಹೇಳಿ ಸಿಕ್ಕಿಬಿದ್ದಾಗ, ಸುಳ್ಳೇಕೆ ಹೇಳಿದೆ? ಎಂದು ಸಿಟ್ಟಿನಿಂದ ಪ್ರತಿಕ್ರಿಯಿಸುವ ಬದಲು ಏನಾಯ್ತು? ವಿವರಿಸುವೆಯಾ? ಎಂದು ಕುತೂಹಲದಿಂದ, ಶಾಂತತೆಯಿಂದ ಕೇಳಿದಾಗ ಮಾತ್ರ ಸತ್ಯದ ಮೇಲೊಂದು ಭರವಸೆ ಅವರಲ್ಲಿ ಮೂಡುತ್ತದೆ.



ಮಕ್ಕಳು ಪ್ರಮಾಣಿಕತೆಯನ್ನು ಕಲಿಯುವುದು ಗದರಿಕೆ ಅಥವಾ ಬೋಧನೆಯಿಂದಲ್ಲ. ಭಾವನಾತ್ಮಕ ರಕ್ಷಣೆಯ ಭರವಸೆ ಇದ್ದಲ್ಲಿ ಮಾತ್ರ ಪ್ರಾಮಾಣಿಕತೆ ಸುಲಭದ ಮಾರ್ಗವೆನಿಸುತ್ತದೆ. ಪ್ರಾಮಾಣಿಕತೆಯ ಮೇಲೆ ನಂಬಿಕೆ ಮೂಡುತ್ತದೆ. ಸುಳ್ಳೇಕೆ ಹೇಳಿದೆ? ಇದು ಪಾಲಕರ ಪ್ರಾಮಾಣಿಕ ಪ್ರಶ್ನೆ. ಆದರೆ ಅದಕ್ಕುತ್ತರ ನೀಡುವ ಪ್ರೌಢತೆ ಮಕ್ಕಳಲ್ಲಿ ಬೆಳೆದಿರುವುದಿಲ್ಲ. ಮಕ್ಕಳೇನಿದ್ದರೂ ನಡೆದ ಘಟನೆಯನ್ನು ಮಾತ್ರ ವಿವರಿಸಬಲ್ಲರು. ಸರಿಯಾಗಿ ಕೇಳಬೇಕಷ್ಟೆ!

ಬಹುತೇಕ ಪಾಲಕರಲ್ಲಿ ಒಂದು ದೊಡ್ಡ ತಪ್ಪು ತಿಳುವಳಿಕೆ ಇದೆ. ಸ್ಟ್ರಿಕ್ಟ್ - ತಂದೆ ತಾಯಿ ಬೇಕಾದಷ್ಟು ಕಟ್ಟುನಿಟ್ಟು ಇದ್ದರೆ ಮಕ್ಕಳು ಪ್ರಾಮಾಣಿಕರಾಗಿಬಿಡುತ್ತಾರೆ, ಪ್ರಾಮಾಣಿಕತೆಯ ಕೊರತೆ ಎಂದರೆ ಅದು ಪಾಲಕರ ಶಿಸ್ತಿನ, ಕಟ್ಟುನಿಟ್ಟಿನ ಕೊರತೆ ಎಂದು. ಕಟ್ಟುನಿಟ್ಟುತನ ಅವಶ್ಯಕ, ಇರಲೇ ಬೇಕು. ಆದರೆ ಅದರ ಜೊತೆ ಭಾವ ಭರವಸೆ - ಸತ್ಯ ಹೇಳಿದರೆ ಅಪಾಯವಿಲ್ಲ ಎಂಬ ನಂಬಿಕೆ ಎಲ್ಲಕ್ಕಿಂತ ಮುಖ್ಯ. ಅದುವೆ ಮಕ್ಕಳ ಸತ್ಯ ಸುಳ್ಳಿನ ನಡುವಿನ ಆಯ್ಕೆಯನ್ನು ನಿರ್ದೇಶಿಸುವುದು. ಅತಿಯೆನಿಸುವಷ್ಟು ಶಿಸ್ತಿನಿಂದ ಬೆಳೆಸಿದ ಮಕ್ಕಳು ಚತುರ ಸುಳ್ಳುಗಾರರಾಗುವುದು ಭಾವ ಭರವಸೆ - ಸತ್ಯ ಹೇಳಿದರೆ ಅಪಾಯವಿಲ್ಲ ಎಂಬ ನಂಬಿಕೆ ಕೊರತೆಯಿದ್ದಲ್ಲಿ.

ಪಾಲಕರ ಪ್ರತಿಕ್ರಿಯೆಯನ್ನು ಸರಿಯಾಗಿ ಊಹಿಸಲು ಸಾಧ್ಯವಾದಾಗ ಮಾತ್ರ ಸತ್ಯ ಅಪಾಯವಲ್ಲ ಎಂದೆನ್ನಿಸುವುದು. ಸುಳ್ಳು ತಿಳಿದಾಗ ಪಾಲಕರು ಒಮ್ಮೆ ಸಿಟ್ಟು, ಇನ್ನೊಮ್ಮೆ ತಾತ್ಸಾರ, ಮತ್ತೊಮ್ಮೆ ಕ್ಷಮೆ ಈ ರೀತಿ ಒಂದೊಂದು ಬಾರಿ ಒಂದೊಂದು ವ್ಯವಹರಿಸಿದಾಗ ಮಕ್ಕಳು ಗೊಂದಲಕ್ಕೊಳಗಾಗುತ್ತಾರೆ. ಕೇವಲ ದಿನಕ್ಕೊಂದು ನೀತಿ ಕಥೆ ಹೇಳಿದರೆ ಮಕ್ಕಳು ನೀತಿವಂತರಾಗಿ ಬಿಡುವುದಿಲ್ಲ!

ಸುಳ್ಳು ಹೇಳಿದೆಯಾ? ಎಂಬುದು ಮೊಕದ್ದಮೆಯಾಗುವ ಬದಲು ಕುತೂಹಲದ, ಭರವಸೆಯ ಪ್ರಶ್ನೆಯಾದಾಗ ಮಾತ್ರ ಸತ್ಯಕ್ಕೊಂದು ಅವಕಾಶ ನಿರ್ಮಾಣವಾಗುತ್ತದೆ. ಎಲ್ಲ ಮಕ್ಕಳ ಎಲ್ಲಾ ಸುಳ್ಳುಗಳೂ ಒಂದೇ ಅಲ್ಲ. ಕೆಲವು ಅವರ ಪ್ರಯೋಗ, ಕೆಲವು ಅವರ ಕಲ್ಪನೆ, ಕೆಲವೊಮ್ಮೆ ಸಾಂದರ್ಭಿಕ, ತಕ್ಷಣದ ಪರಿಹಾರ ಇತ್ಯಾದಿ. ಪಾಲಕರು ಮಕ್ಕಳ ಸುಳ್ಳಿಗಿಂತ ಗ್ರಹಿಸಬೇಕಾದದ್ದು ಅದು ಮರುಕಳಿಸುವ ರೀತಿಯನ್ನು. ಅಪರೂಪಕ್ಕೆ ಸುಳ್ಳು ಹೇಳುವುದು ಮುಗ್ಧ. ಅದುವೆ ಅಭ್ಯಾಸವಾಗಿದ್ದಲ್ಲಿ, ಸುಳ್ಳು ಭಾವರಹಿತವಾಗಿ ಹೇಳುತ್ತಿದ್ದಲ್ಲಿ ಅದು ಸಮಸ್ಯೆ. ಆಗ ಪಾಲಕರ ಆತ್ಮಾವಲೋಕನವಾಗಬೇಕು.

ಸುಳ್ಳನ್ನೇ ಹೇಳದ ಮಕ್ಕಳನ್ನು ಬೆಳೆಸುವುದು ಪಾಲನೆಯ ಗುರಿಯಾಗಿಸಿಕೊಳ್ಳಬಾರದು. ಎಲ್ಲ ಕಾಲಕ್ಕೂ ಸತ್ಯವನ್ನೇ ಹೇಳುವ ಕಥೆಯಲ್ಲಷ್ಟೇ ಚಂದ, ಸರಿ. ನಿಜ ಜೀವನದಲ್ಲಿ ಸತ್ಯವನ್ನೇ ಹೇಳಿ ಕೊಂಡಿದ್ದರೆ ಬದುಕು ಹೀಗಾಗುತ್ತದೆ ಎನ್ನುವುದೂ ಸತ್ಯಹರಿಶ್ಚಂದ್ರನ ಕಥೆ ಹೇಳುವ ಸತ್ಯವೇ ಅಲ್ಲವೇ? ಸತ್ಯಹರಿಶ್ಚಂದ್ರನ ಗುಣ ಮಾದರಿ, ಆದರೆ ಅದು ಮಾನವಸಹಜವಲ್ಲ ಅಲ್ಲವೇ?

ಪಾಲನೆಯ ಉದ್ದೇಶ ಒಳ್ಳೆಯ ಇನ್ನೊಂದು ಮನುಷ್ಯನನ್ನು ಬೆಳೆಸುವುದು.

ಸತ್ಯ ಹೇಳಲು ಹೆದರದ ಮಕ್ಕಳನ್ನು ಬೆಳೆಸುವುದು. ಯಾವುದೇ ತಪ್ಪನ್ನು ರಿಪೇರಿ ಮಾಡಿಕೊಳ್ಳಲು ಸಾಧ್ಯವೆಂಬ ನಂಬಿಕೆ ಬೆಳೆಯಲು ಅವಕಾಶ ಮಾಡಿಕೊಡುವುದು. ಪ್ರಮಾಣಿಕತೆ ಎನ್ನುವುದು ಪರಿಪೂರ್ಣತೆಯಲ್ಲ, ಅದು ನಂಬಿಕೆಯ ವಿಷಯ. ನಾವು ದೊಡ್ಡವರು ಯಾರಲ್ಲಿ ಸುಳ್ಳು ಹೇಳುತ್ತೇವೆ? ಯಾರಲ್ಲಿ ಯಾವಾಗ ಸತ್ಯಹೇಳುತ್ತೇವೆ? ಎಂದು ಒಮ್ಮೆ ಯೋಚಿಸಿ ನೋಡಿ.

> ಅಪ್ಪ ಮನೆಗೆ ಬಂದವರೇ ನನ್ನನ್ನು ಕರೆದರು. ಪರೀಕ್ಷೆ ತಯಾರಿ ಹೇಗೆ ನಡೆಯುತ್ತಿದೆ? ಎಂದು ಕೇಳಿದರು. ಚೆನ್ನಾಗಿ ನಡೆಯುತ್ತಿದೆ ಎಂದೆ. ಎಷ್ಟು ಮಾರ್ಕ್ಸ್ ಬರಬಹುದು? ನಾನು ಉತ್ತರಿಸಲಿಲ್ಲ. ಪ್ರಿಪರೇಟರಿ ಪರೀಕ್ಷೆ ಪ್ರಕಾರ? ಡಿಸ್ಟಿಂಕ್ಷನ್ ಬರಬಹುದಾ? ಎಂದು ಕೇಳಿದರು. ಏನೋ ಸ್ವಲ್ಪ ಉಲ್ಟಾ ಹೊಡೆಯುತ್ತಿದೆಯಲ್ಲ ಎಂದೆನಿಸಿತು.

ಯಾರಲ್ಲಿ ಭಾವಭರವಸೆ ಇರುತ್ತದೆಯೋ, ಅವರಲ್ಲಿಯೇ ನಾವು ಸತ್ಯ ಇದ್ದದ್ದು ಇದ್ದ ಹಾಗೆ ಹೇಳುವುದು ಅಲ್ಲವೇ? ಪ್ರಾಮಾಣಿಕತೆ, ನೈತಿಕತೆ, ಅಪರಾಧಭಾವ, ಸತ್ಯ- ಸುಳ್ಳು ಇದೊಂದಿಷ್ಟು ವಿಷಯದ ಬಗ್ಗೆ ಹೇಳುವಾಗ, ಗಾಂಧೀಜಿ ಹಣ, ಚಿನ್ನ ಕದ್ದು ಬೀಡಿ ಸೇದಿದ ಕಥೆ ನೆನಪು ಮಾಡಿ ಕೊಳ್ಳುತ್ತೇವೆ. ಇನ್ನೊಂದು ಅಷ್ಟು ಪ್ರಚಲಿತವಲ್ಲದ ಕಥೆಯಿದೆ.

ಇದು ಗಾಂಧೀಜಿ ಮಗ ಮತ್ತು ಮೊಮ್ಮಗನದ್ದು. ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ವಾಪಸ್ ಭಾರತಕ್ಕೆ ಬಂದಾಗ ಅವರ ಮಗ ಮಣಿಲಾಲ್ ಗಾಂಧಿ ದಕ್ಷಿಣ ಆಫ್ರಿಕಾದಲ್ಲಿಯೇ ಉಳಿದುಕೊಳ್ಳುತ್ತಾರೆ. ಅಲ್ಲಿಯೇ ಇದ್ದು ಇಂಡಿಯನ್ ಒಪೀನಿಯನ್ ಪತ್ರಿಕೆ ಮತ್ತು ಉಳಿದ ಕೆಲಸ, ವ್ಯವಹಾರವನ್ನು ಮಣಿಲಾಲ್ ಮುಂದುವರಿಸಿಕೊಂಡು ಹೋಗುತ್ತಾರೆ.

ಒಮ್ಮೆ ಮಣಿಲಾಲರಿಗೆ ಜೊಹಾನಾಸ್ ಬರ್ಗ್‌ನಲ್ಲಿ ದಿನವಿಡೀ ಮೀಟಿಂಗ್ ಇರುತ್ತದೆ. ಆಗ ಅವರ ಮಗ ಅರುಣ್ ಗಾಂಧೀಯಲ್ಲಿ ತಮ್ಮನ್ನು ಕಾರಿನಲ್ಲಿ ಡ್ರೈವ್ ಮಾಡಿಕೊಂಡು ಕರೆದುಕೊಂಡು ಹೋಗಲು ಹೇಳುತ್ತಾರೆ. ಅಪ್ಪ ಮೀಟಿಂಗ್‌ನಲ್ಲಿ ಭಾಗವಹಿಸುವ ವೇಳೆ ಕಾರು ಸರ್ವೀಸ್ ಮಾಡಿಸಿದರಾಯ್ತು ಎಂದು ಅವರಿಬ್ಬರು ಹೊರಡುತ್ತಾರೆ.

ಅರುಣ್ ಗಾಂಧಿ ಈ ಘಟನೆಯನ್ನು ಬರೆದುಕೊಂಡದ್ದು ಹೀಗೆ : ನಾನು ತಂದೆಯನ್ನು ಅಲ್ಲಿ ಬಿಟ್ಟು, ಕಾರ್ ಅನ್ನು ರಿಪೇರಿಗೆ ಗ್ಯಾರೇಜ್‌ನಲ್ಲಿ ಬಿಟ್ಟೆ. ಅಪ್ಪನ ಮೀಟಿಂಗ್ ಮುಗಿಯುವುದು ಸಂಜೆ ಐದಕ್ಕೆ. ಅಲ್ಲಿಯವರೆಗೆ ಏನು ಮಾಡುವುದು? ಹಾಗಾಗಿ ಅಲ್ಲಿಯೇ ಇದ್ದ ಸಿನಿಮಾ ಒಂದಕ್ಕೆ ಹೋದೆ. ಆ ದಿನ ಒಂದೇ ಟಿಕೆಟ್- ಒಂದರ ಬೆನ್ನಿಗೆ ಇನ್ನೊಂದು, ಎರಡು ಸಿನಿಮಾ ನೋಡುವ ಡಬಲ್ ಫೀಚರ್ ಇತ್ತು.

ಎರಡು ಸಿನಿಮಾ ಮುಗಿಯುವಾಗ ಆರು ಗಂಟೆಯಾಗಿ ಹೋಯ್ತು! ಬೆಳಿಗ್ಗೆ ಹೊರಡುವಾಗ ತಂದೆಯಲ್ಲಿ ಇಂತಹ ರಸ್ತೆಯ ಮೂರ್ಕಿಯಲ್ಲಿ ನಿಂತಿರುತ್ತೇನೆ ಎಂದು ಹೇಳಿದ್ದೆ. ಕಾರನ್ನು ಓಡಿಸಿಕೊಂಡು ಗಡಿಬಿಡಿಯಲ್ಲಿ ಹೋದೆ. ಜೋರಾಗಿ ಮಳೆ ಸುರಿಯುತ್ತಿತ್ತು. ಅಪ್ಪ ಅಲ್ಲಿ ಮಳೆಯಲ್ಲಿ ನೆನೆಯುತ್ತ ನಿಂತಿದ್ದರು. ಓಡೋಡಿ ಅವರ ಬಳಿ ಹೋಗಿ, ಅಪ್ಪಾ ಕ್ಷಮಿಸಿ, ಕಾರ್ ಗ್ಯಾರೇಜ್‌ನವನು ಅಂದು ಕೊಂಡದ್ದಕ್ಕಿಂತ ಹೆಚ್ಚಿಗೆ ಸಮಯ ತೆಗೆದುಕೊಂಡುಬಿಟ್ಟ ಎಂದೆ.

ಅಪ್ಪ ಮಾತಾಡಲಿಲ್ಲ. ಬದಲಿಗೆ ತಲೆತಗ್ಗಿಸಿದರು. ನೀನಿನ್ನೂ ಬರಲಿಲ್ಲವಲ್ಲ ಎಂದು ಗ್ಯಾರೇಜ್ ನವನಿಗೆ ಫೋನ್ ಮಾಡಿದೆ. ಅವನು ಮೂರು ಗಂಟೆಗೆಲ್ಲ ಕಾರು ರೆಡಿಯಾಗಿದೆ ಎಂದ. ವಿಷಯ ಅದಲ್ಲ - ನಾನೀಗ ಗಂಭೀರವಾಗಿ ಒಂದು ವಿಷಯವನ್ನು ಯೋಚಿಸಬೇಕಾಗಿದೆ. ಸುಳ್ಳು ಹೇಳದ ಮಗನನ್ನು ಬೆಳೆಸುವಲ್ಲಿ ನಾನೆಲ್ಲಿ ಸೋತೆ? ಎಂದು ಧ್ಯಾನಿಸಬೇಕಾಗಿದೆ. ಅಪ್ಪ ಆ ದಿನ ಕಾರು ಹತ್ತಲಿಲ್ಲ, ಮಳೆಯಲ್ಲಿ ನಡೆದುಕೊಂಡೇ ಹೊರಟರು. ನಾನು ಕಾರೊಳಗೆ ಅವರನ್ನು ಮನೆಯವರೆಗೆ ಹಿಂಬಾಲಿಸಿದೆ. ನಾವಿಬ್ಬರು ಮನೆ ಸೇರಿದಾಗ ನನ್ನ ಅಂಗಿ ಅವರಿಗಿಂತ ಹೆಚ್ಚು ತೊಯ್ದಿತ್ತು!

ಪ್ರಾಮಾಣಿಕತೆ ಕೇವಲ ಆಜ್ಞೆಗಳಿಂದ ಮೂಡುವುದಿಲ್ಲ, ಅದು ಭಾವುಕ ಸುರಕ್ಷತೆಯಿಂದ ನಿರ್ಮಾಣವಾಗುತ್ತದೆ.

**- ಶಿಶಿರ್** ಹೆಗಡೆ

---

» **ನಮ್ಮಲಿರುವ ಚೇತನ ಒಂದೇ ಆಗಿದ್ದು ಕೂಡ ನಾವ್ಯಾಕೆ ಒಂದೇ ಸಮವಾಗಿಲ್ಲ? ನಮ್ಮಲಿರುವ ಆ ಚೇತನವನ್ನು ನಾವೇಗೆ ದುಡಿಸಿಕೊಳ್ಳುವ ಕ್ಷಮತೆ ಹೊಂದಿದ್ದೇವೆ ಎನ್ನುವುದರ ಆಧಾರದ ಮೇಲೆ ನಾವ್ಯಾರು ಎನ್ನುವುದು ಕೂಡ ನಿರ್ಧಾರವಾಗುತ್ತದೆ ಎನ್ನುವ ಸರಳ ಸತ್ಯದ ಸಾಕ್ಷಾತ್ಕಾರ ನಮಗಾಗಿ ಬಿಟ್ಟರೆ ಸಾಕು. ಹಿಂತಿರುಗಿ ನೋಡುವ ಪ್ರಮೇಯ ಬರುವುದಿಲ್ಲ.**

# ಕೋಟಿಗೊಬ್ಬರಾಗುವ ಆಯ್ಕೆ ನಮ್ಮ ಕೈಲಿದೆ!

ವಿಶ್ವರಂಗ

ಒಂದೂರಿನಲ್ಲಿ ಒಬ್ಬ ರಾಜನಿದ್ದನಂತೆ, ಆತ ದಯಾಳು. ಹೀಗಾಗಿ ಪರವೂರಿನಿಂದ ಬರುವವರಿಗೆ ಒಂದು ಅನ್ನ ಛತ್ರ ಕಟ್ಟಿಸಿರುತ್ತಾನೆ. ಎಲ್ಲವೂ ಚೆನ್ನಾಗಿ ನಡೆದುಕೊಂಡು ಹೋಗುತ್ತಿರುತ್ತದೆ. ಎಲ್ಲಿಯವರೆಗೆ ಚೆನ್ನಾಗಿ ನಡೆಯುತ್ತಿರುತ್ತದೆ ಅಲ್ಲಿಯವರೆಗೆ ಸರಿ. ಮೊದಲೆರಡು ದಿನ ಜನ ರಾಜನನ್ನು ಹೊಗಳಿದ್ದೇ ಹೊಗಳಿದ್ದು. ಆಮೇಲೆ ಅದು ನಾರ್ಮಲ್ ಆಗಿ ಹೋಗುತ್ತದೆ.

ಇದು ನಮ್ಮ ಹಕ್ಕು ಎನ್ನುವಂತೆ ಜನ ವರ್ತಿಸಲು ಶುರು ಮಾಡುತ್ತಾರೆ. ಹೀಗಿರುವಾಗ ಒಂದು ದಿನ ಹದ್ದು ಹಸಿವಿನಿಂದ ಬಳಲುತ್ತಾ ಕಣ್ಣಿಗೆ ಕಂಡ ಹಾವನ್ನು ಹಿಡಿದು ಹಾರುತ್ತ ಹೋಗುವಾಗ ಹಾವಿನ ಬಾಯಿಂದ ಒಂದೆರಡು ಹನಿ ವಿಷ ಅಡುಗೆಗೆ ಬೀಳುತ್ತದೆ. ವಿಷಾಹಾರ ಸೇವಿಸಿ ಒಂದಿಬ್ಬರು ಮೃತರಾಗುತ್ತಾರೆ.

ಒಂದಿಬ್ಬರು ಅಸ್ವಸ್ಥರಾಗುತ್ತಾರೆ. ಈ ಸಾವು ನೋವಿನ ಲೆಕ್ಕವನ್ನು ಯಾರ ಖಾತೆಗೆ ಹಾಕುವುದು ಎಂದು ಚಿತ್ರಗುಪ್ತ ಯಮಧರ್ಮನನ್ನು ಕೇಳಲು, ಯಮರಾಜ ಗೊಂದಲಕ್ಕೆ ಒಳಗಾಗಿ, ರಾಜನನ್ನೇ ಕೇಳೋಣ ಎನ್ನುತ್ತಾನೆ. ಚಿತ್ರಗುಪ್ತ ಮಾರುವೇಷದಲ್ಲಿ ಬಂದು ರಾಜನನ್ನು ಈ ಕುರಿತು ಕೇಳಲು, ಒಂದು ದಿನ ಬಿಟ್ಟು ಬರಲು ರಾಜ ಹೇಳುತ್ತಾನೆ.

ರಾಜ ಮಾರುವೇಷದಲ್ಲಿ ಛತ್ರದ ಬಳಿ ಏನಾಯ್ತು ಎಂದು ವಿಚಾರಿಸಲು ಹೋಗುತ್ತಾನೆ. ಹೋಗುವಾಗ ಈ ಸಾವಿನ ಘಟನೆ ನಡೆದು ಆರು ತಿಂಗಳ ಮೇಲಾಯ್ತು. ಇವತ್ತಿಗೆ ಮತ್ತೆಲ್ಲವೂ ಸರಿಯಾಗೆ ನಡೆಯುತ್ತಿದೆ. ಆದರೂ ಈ ಪ್ರಶ್ನೆ ಮತ್ತೇಕೆ ಉದ್ಭವವಾಯ್ತು ಎಂದು ಯೋಚಿಸುತ್ತ ಛತ್ರವಿದ್ದ ಜಾಗವನ್ನು ತಲುಪುತ್ತಾನೆ.

ಅಲ್ಲಿ ಅರಳಿಕಟ್ಟೆಯಲ್ಲಿ ಹರಟೆ ಹೊಡೆಯುತ್ತಾ ಕುಳಿತ ಐದಾರು ಜನರಬ್ಬ ರಾಜನನ್ನು ನೋಡಿ ಏಯ್ ದಾರಿಹೋಕ ಹುಷಾರು, ಛತ್ರದಲ್ಲಿ ಊಟ ಮಾಡಬೇಡ. ಅಲ್ಲಿ ಊಟ ಮಾಡಿದವರೆಲ್ಲ ಸಾಯುತ್ತಾರೆ. ಇದು ರಾಜನದೇ ಏನೋ ಕಿತಾಪತಿ ಇರಬೇಕು ಎನ್ನುತ್ತಾನೆ.

ಇನ್ನೊಬ್ಬನಂತೂ ರಾಜನನ್ನು ಜಾತಿವಾದಿ, ತನ್ನ ಜಾತಿಯವರಲ್ಲದೆ ಇತರ ಜಾತಿಯವರನ್ನು ಕೊಲ್ಲಲು ಮಾಡಿರುವ ಹುನ್ನಾರವಿದು ಎನ್ನುವ ಮಾತನ್ನು ಆಡುತ್ತಾನೆ. ಮಾರುವೇಷದಲ್ಲಿದ್ದ ರಾಜ ನಕ್ಕು ಘಟನೆ ಹೇಗಾಗಿರಬಹುದು ಎನ್ನುವುದರ ನೈಜ ಚಿತ್ರಣ ಪಡೆದು ಮರಳುತ್ತಾನೆ. ಮರುದಿನ ಮಾರುವೇಷದಲ್ಲಿ ಚಿತ್ರಗುಪ್ತ ಬಂದಾಗ ರಾಜ ಅವನನ್ನು ಕುರಿತು ಅರಳಿಕಟ್ಟೆಯ ಮೇಲೆ ಕುಳಿತು ಊಹಾಪೋಹದ ಮಾತುಗಳನ್ನು ಆಡುತ್ತಿರುವ ಐವರ ಹೆಸರು ಹೇಳಿ ಈ ಸಾವು ನೋವಿನ ಲೆಕ್ಕವನ್ನು ಅವರ ಖಾತೆಗೆ ಹಾಕು ಎನ್ನುತ್ತಾನೆ.

ಚಿತ್ರಗುಪ್ತನಿಗೆ ಆಶ್ಚರ್ಯವಾಗಿ, ನೀವು ಹೇಳಿದಂತೆ ಮಾಡುವೆ, ಆದರೆ ಒಂದು ಪ್ರಶ್ನೆ. ಅವರ ತಪ್ಪಾದರೂ ಏನು? ಎನ್ನುತ್ತಾನೆ. ಆಗ ರಾಜ ನೋಡು ನಾನು ಬೇರೆ ಊರಿನಿಂದ ಬರುವ ಯಾತ್ರಿಕರಿಗೆ ಅನುಕೂಲವಾಗಲಿ ಎನ್ನುವ ಕಾರಣದಿಂದ ಛತ್ರ ಕಟ್ಟಿಸಿದೆ, ಹೀಗಾಗಿ ನನ್ನ ತಪ್ಪಿಲ್ಲ. ಪಾಪದ ಹದ್ದು ಹೊಟ್ಟೆ ಹಸಿವಿನ ಕಾರಣ ಹಾವನ್ನು ಹಿಡಿದಿದೆ, ಹೀಗಾಗಿ ಅದರ ತಪ್ಪು ಕೂಡ ಇಲ್ಲ. ಇನ್ನು ಹಾವು ಅದಕ್ಕೆ ಜೀವ ಭಯದ ಕಾರಣದಿಂದ ಅದರ ಬಾಯಿಯಿಂದ ವಿಷ ತೊಟ್ಟಿಕ್ಕಿದೆ.

ಹೀಗಾಗಿ ಅದರ ತಪ್ಪು ಕೂಡ ಇಲ್ಲ. ಹೀಗಾಗಿ ನಿಜಕ್ಕೂ ಸಾವು ನೋವಿನ ಲೆಕ್ಕಾಚಾರ ಯಾರ ಖಾತೆಗೆ ಹಾಕುವುದು ಎನ್ನುವುದು ಬಹಳ ಕಷ್ಟದ ವಿಚಾರ. ಆದರೆ ಆ ಅರಳೀಕಟ್ಟೆಯಲ್ಲಿ ಕುಳಿತು ಘಟನೆಯ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳದೆ ನಿಂದಿಸುತ್ತಿರುವ ಆ ಐವರ ಹೆಸರನ್ನು ತಪ್ಪಿನ ಲೆಕ್ಕಕ್ಕೆ ಬರೆದು ಕೊಳ್ಳುವುದು ತಪ್ಪಲ್ಲ ಎನ್ನುತ್ತಾನೆ.

ಈ ಉತ್ತರದಿಂದ ಸಂಪ್ರೀತನಾದ ಚಿತ್ರಗುಪ್ತ ಯಮಲೋಕಕ್ಕೆ ಮರಳುತ್ತಾನೆ. ಇದು ಕಥೆ ಎನ್ನಿಸುತ್ತದೆ ಅಲ್ಲವೇ? ಹೌದು ಇದು ಕಥೆ. ಆದರೆ ಈ ಕಥೆಯಲ್ಲಿ ಬರುವ ಅರಳೀಕಟ್ಟೆಯಲ್ಲಿ ಕುಳಿತ ಐವರಂತೆ ನಮ್ಮ ಸಮಾಜದಲ್ಲಿ ಕೋಟಿ ಕೋಟಿ ಜನರಿದ್ದಾರೆ ಎಂದು ಹೇಳಲು ಈ ಕಥೆ ಹೇಳಬೇಕಾಯ್ತು.

ಸಾಮಾಜಿಕ ಜಾಲತಾಣ ಎನ್ನುವುದು ಹೊಸ ಅರಳೀಕಟ್ಟೆ. ಹಿಂದೆ ಮುಂದೆ ಗೊತ್ತಿಲ್ಲದೇ ಎಲ್ಲದಕ್ಕೂ ಅಭಿಪ್ರಾಯ ಮಂಡಿಸುವವರು ಆ ಅರಳೀಕಟ್ಟೆಯಲ್ಲಿ ಕುಳಿತವರಂತೆ! ಮಧ್ಯರಾತ್ರಿಯಲ್ಲಿ ಸ್ವಲ್ಪ ಸದ್ದಾದರೂ ಸಾಕು ಶ್ವಾನಗಳು ಬೊಗಳಲು ಶುರು ಮಾಡುತ್ತವೆ. ಒಂದು ಬೊಗಳಿತು ಎಂದು ಇನ್ನೊಂದು, ಇನ್ನೊಂದು ಬೊಗಳಿತು ಎಂದು ಮತ್ತೊಂದು! ಏತಕ್ಕೆ ಬೊಗಳುತ್ತಿದ್ದೇವೆ ಎನ್ನುವ ಪರಿಜ್ಞಾನ ಯಾವ ಶ್ವಾನಕ್ಕೂ ಇರುವುದಿಲ್ಲ.

ನಾವು ಈ ರೀತಿ ವರ್ತಿಸುವುದು ಬೇಡ ಅಲ್ಲವೇ? ನಾವು ಕೋಟಿಯಲ್ಲಿ ಒಬ್ಬರಾಗುವುದಕ್ಕೂ, ಕೋಟಿಗೊಬ್ಬರಾಗುವುದಕ್ಕೂ ಬಹಳ ವ್ಯತ್ಯಾಸವಿದೆ. ನಮ್ಮ ಗೀತೆ, ಉಪನಿಷತ್ತು, ಹಠ ಯೋಗ ಇತ್ಯಾದಿ ಎಲ್ಲವೂ ಇದನ್ನೇ ಸಾರುತ್ತದೆ.

ಯೋಗ ವಸಿಷ್ಠದ ಒಂದು ಶ್ಲೋಕ:

ಯೈವ ಸಿದ್ ಭುವನಾ ಭೋಗಭೂಷನೇ ವ್ರೋಮ್ನಿ ಭಾಸ್ಕರೇ

ಧಾರಾವಿವರಕೋಶಸ್ಥೇ ಸೈವ ಚಿತ್ಕಿಟಕೋದರೇ!

ಅರ್ಥ, ಸೃಷ್ಟಿಯಲ್ಲಿರುವ ಶಕ್ತಿ ಒಂದೇ ಎಂದು ಹೇಳುತ್ತದೆ. ಅಗಾಧವಾಗಿ ಬೆಳಕುತ್ತಿರುವ ಸೂರ್ಯ ನಲ್ಲಿ ಮತ್ತು ಅತ್ಯಂತ ಸಣ್ಣ ಕ್ರಿಮಿಯಲ್ಲಿರುವ ಶಕ್ತಿ ಒಂದೇ, ಎರಡರಲ್ಲೂ ಇರುವ ಆ ಶಕ್ತಿ ದೈವಸ್ವರೂಪಿಯಾಗಿದೆ. ಹೀಗಾಗಿ ಬುದ್ಧಿ, ಸಂಪತ್ತು, ಸಾಮಾಜಿಕ ಶ್ರೇಣಿಯಿಂದ ಬೇರ್ಪಡಿಸಿ ನೋಡುವುದು ಯುಕ್ತವಲ್ಲ ಎನ್ನುತ್ತದೆ.

ಅಷ್ಟಾವಕ್ರ ಗೀತೆಯಲ್ಲಿ ಒಂದು ಸಾಲು, ಏಕೋ ಹುಂ ದೇಹವಾನಪಿ ಎಂದು ಹೇಳುತ್ತದೆ. ಅಂದರೆ ದೇಹದ ರಚನೆಯಿಂದ ನಾವು ಬೇರೆ ಬೇರೆ ಅಷ್ಟೇ. ನಾವು ಹೇಳುವ ಕರಿಯ, ಬಿಳಿಯ, ದಪ್ಪ, ಸಣ್ಣ ಎಲ್ಲವೂ ದೈಹಿಕ ರಚನೆಯಿಂದ ನಮ್ಮಲ್ಲಿರುವ ಭೇದವನ್ನು ತೋರಿಸುತ್ತದೆ. ಆದರೆ ಆತ್ಮದಲ್ಲಿರುವ ಶಕ್ತಿ, ಚೇತನ ಒಂದೇ ಎನ್ನುವುದು ಇದರರ್ಥ.


ಆತ್ಮದಲ್ಲಿನ ಚೇತನ ಒಂದೇ ಆಗಿದ್ದರೂ ಕೂಡ ಸಮಾಜದಲ್ಲಿ ಇಷ್ಟೊಂದು ವ್ಯತ್ಯಾಸಗಳು ಏತಕ್ಕಿವೆ? ಬಡವ -ಶ್ರೀಮಂತ, ಬುದ್ಧಿವಂತ -ದಡ್ಡ, ಪಾಪ-ಪುಣ್ಯ ಈ ರೀತಿ ವ್ಯತ್ಯಾಸಗಳ ಪಟ್ಟಿಯೇ ಅದೇಕೆ ಇಷ್ಟು ಲಂಬವಾಗಿದೆ.

ನಮ್ಮಲಿರುವ ಚೇತನ ಒಂದೇ ಆಗಿದ್ದು ಕೂಡ ನಾವ್ಯಾಕೆ ಒಂದೇ ಸಮವಾಗಿಲ್ಲ? ನಮ್ಮಲಿರುವ ಆ ಚೇತನವನ್ನು ನಾವೇಗೆ ದುಡಿಸಿಕೊಳ್ಳುವ ಕ್ಷಮತೆ ಹೊಂದಿದ್ದೇವೆ ಎನ್ನುವುದರ ಆಧಾರದ ಮೇಲೆ ನಾವ್ಯಾರು ಎನ್ನುವುದು ಕೂಡ ನಿರ್ಧಾರವಾಗುತ್ತದೆ ಎನ್ನುವ ಸರಳ ಸತ್ಯದ ಸಾಕ್ಷಾತ್ಕಾರ ನಮಗಾಗಿ ಬಿಟ್ಟರೆ ಸಾಕು. ಹಿಂತಿರುಗಿ ನೋಡುವ ಪ್ರಮೇಯ ಬರುವುದಿಲ್ಲ.

ಸೃಷ್ಟಿಯಲ್ಲಿನ ಸಣ್ಣ ಕ್ರಿಮಿಯಿಂದ ಪ್ರಜ್ವಲಿಸುವ ಸೂರ್ಯನವರೆಗೆ ಎಲ್ಲರಲ್ಲೂ ಇರುವುದು ಅದೇ ಚೇತನ. ಆದರೂ ಇಷ್ಟೊಂದು ಭೇದ ಉಂಟಾಗಿರುವುದು, ಬಡವ - ಶ್ರೀಮಂತ, ಸೋಲು -ಗೆಲುವು ಇವೆಲ್ಲವೂ ಸೃಷ್ಟಿಯಾಗಿರುವುದು ಕರ್ಮದ ಕಾರಣದಿಂದ, ನಮ್ಮಲ್ಲಿರುವ ಶಕ್ತಿಯನ್ನು ಹೇಗೆ ಬಳಸಿಕೊಂಡೆವು ಎನ್ನುವುದರ ಆಧಾರದ ಮೇಲೆ ಇವು ಸೃಷ್ಟಿಯಾಗಿವೆ.

ನೌಕರ, ಯಜಮಾನ, ಸಿರಿವಂತ, ಬಡವ, ಅಪ್ರಯೋಜಕ ಹೀಗೆ ಸಮಾಜದಲ್ಲಿ ಚಾಲ್ತಿಯಲ್ಲಿರುವ ಸಾವಿರಾರು ಪದಗಳು ನಮ್ಮನ್ನು ವಿಭಜಿಸುತ್ತವೆ. ಹೀಗೇಕೆ? ಅಷ್ಟಾವಕ್ರ ಗೀತೆಯ ಒಂದು ಶ್ಲೋಕ: ತನುಮಾತ್ರೋ ಭವೇದೇವ ಪಾತೋ ಯದ್ವದ್ವಿಚರಿತಃ ಆತ್ಮಾ ತನ್ಮಾತ್ರಂ ಏವೇದಂ ತದ್ವದ್ವಿಶ್ವಂ ವಿಚಾರಿತಮ್.

ಒಂದು ಬಟ್ಟೆಯನ್ನು ನೋಡಿ, ಅದರಲ್ಲಿರುವುದು ಎಲ್ಲ ನೂಲಿನ ಎಳೆಗಳೇ. ಆದರೆ, ಕೆಲವು ನೂಲುಗಳ ಮೇಲೆ ಚಿತ್ತಾರವಿದೆ, ಕೆಲವುಗಳು ಹಾಗೆ ಉಳಿದುಕೊಂಡಿವೆ. ಒಟ್ಟಾರೆ ಬಟ್ಟೆ ಉತ್ಪನ್ನವಾದದ್ದು ಈ ನೂಲುಗಳಿಂದ, ಆದರೆ ಕೆಲವು ನೂಲುಗಳು ಬಣ್ಣದ ಚಿತ್ತಾರ ರೂಪಿಸಿಕೊಂಡು ಅಂದವನ್ನು ಹೆಚ್ಚಿಸಿವೆ.



ಒಂದೇ ನೂಲು ವಿಭಿನ್ನವಾಗುವುದು ತನ್ನಲ್ಲಿರುವ ಅಂತಃಸತ್ವದಿಂದ! ಎನ್ನುವ ಅರ್ಥವನ್ನು ಈ ಶ್ಲೋಕ ನೀಡುತ್ತದೆ. ಮೇಲಿನ ಕಥೆಯ ವಿಚಾರಕ್ಕೆ ಮತ್ತೆ ಬರೋಣ. ಅರಳೀಕಟ್ಟೆಯ ಮೇಲೆ ಕುಳಿತವರು ಹೆಚ್ಚಿನದೇನೂ ಮಾಡದೆ ಅಪಪ್ರಚಾರ ಮಾಡದೆ ಸುಮ್ಮನೆ ಕುಳಿತಿದ್ದರೂ ಸಾಕಿತ್ತು.

ಸಾವು ನೋವಿನ ಲೆಕ್ಕಾಚಾರ ಅವರ ತಲೆಗೆ ಬರುತ್ತಿರಲಿಲ್ಲ. ನಾವ್ಯಾರು ಎನ್ನುವುದನ್ನು ಬರೆದು ಕೊಳ್ಳುವ ಅಮೋಘ ಅವಕಾಶವನ್ನು ಭಗವಂತ ನಮಗೆ ಬಿಟ್ಟಿದ್ದಾನೆ. ಆದರೆ ನಾವೆಂತಹ ಮತಿ ಹೀನರು ಎಂದರೆ ಹಣೆಬರಹ ಬರೆಯುವುದು ಬೇರೆ ಯಾರೋ ಎನ್ನುವ ಉಪೇಕ್ಷೆಯಲ್ಲಿ ಬದುಕುತ್ತಿದ್ದೇವೆ.

ನಿಮಗೆ ಗೊತ್ತಿರಲಿ ಜಗತ್ತಿನಲ್ಲಿ ಕೇವಲ 3 ಪ್ರತಿಶತ ಜನರಿಗೆ ಮಾತ್ರ ಏನು ಬೇಕು ಎನ್ನುವುದರ ಬಗ್ಗೆ ನಿಖರತೆ ಇರುತ್ತದೆ. ಅಂದರೆ ಈ ಮೂರು ಪ್ರತಿಶತ ಜನ ಮಾತ್ರ ಬದುಕಿನಿಂದ ನನಗೇನು ಬೇಕು ಎನ್ನುವುದರ ಬಗ್ಗೆ ಚಿಂತಿಸಿರುತ್ತಾರೆ. ಉಳಿದ 97 ಪ್ರತಿಶತ ಜನರಿಗೆ ಏನು ಬೇಕು ಎನ್ನುವುದೇ ಗೊತ್ತಿರುವುದಿಲ್ಲ.

ಮುಕ್ಕಾಲು ಪಾಲು ಜನ ಈ ಜಗತ್ತಿನಲ್ಲಿ ಸೋಮಾರಿಗಳು. ಅವರಿಗೆ ಮೈ ಬಗ್ಗಿಸಿ ಕೆಲಸ ಮಾಡುವುದು ಬೇಕಿರುವುದಿಲ್ಲ. ಅವರು ಅಧ್ಯಾತ್ಮದ ಹೆಸರಿನಲ್ಲಿ ತಮ್ಮ ಹುಳುಕನ್ನು ಮುಚ್ಚಿಟ್ಟುಕೊಳ್ಳುವ ಪ್ರಯತ್ನ ಮಾಡುತ್ತಾರೆ. ನೀವು ಯಾರಿಗೂ ಉತ್ತರಿಸಬೇಕಿಲ್ಲ. ನಿಮ್ಮ ಆತ್ಮಸಾಕ್ಷಿಗೆ ಮೋಸ ಮಾಡಿಕೊಳ್ಳದೆ ಉತ್ತರಿಸಿಕೊಳ್ಳಿ.

ಮೇಲಿನ ಸಾಲುಗಳಲ್ಲಿ ನೀವಿಲ್ಲ ಎಂದು ನಿಮ್ಮ ಮನಸ್ಸು ಹೇಳಿದರೆ ಅಷ್ಟು ಸಾಕು. ಜಗತ್ತಿನ ಅನುಮೋದನೆಗೆ ಕಾಯುವ ಅವಶ್ಯಕತೆಯಿಲ್ಲ. ಮೇಲಿನ ಸಾಲುಗಳಲ್ಲಿ ಹೇಳಿದಂತೆ ಊಹೆ ಮಾಡಿ ಕೊಂಡಾಗ ಎಲ್ಲವೂ ಇದ್ದೂ ಕೂಡ ಬಹು ಜನರು ಏನೂ ಏಕೆ ಮಾಡುವುದಿಲ್ಲ ಎನ್ನವುದಕ್ಕೆ ಉತ್ತರ ಸಿಕ್ಕಿತು ಅಲ್ಲವೇ? ಮೂಲವಾಗಿ ಬೇಕಾಗಿರುವುದು ಆತ್ಮಬಲ ಎನ್ನುವ ಇಂಧನ.


ನಮಗೆ ಬೇಕಾದ, ನಾವು ಬಯಸಿದ ಎಲ್ಲವೂ ನಮ್ಮ ಕೈಯಳತೆಯ ದೂರದಲ್ಲಿ ಇರುತ್ತದೆ. ಅದು ನಮ್ಮದಾಗುತ್ತದೆ ಎನ್ನುವ ಅರಿವು ಕೆಲವೇ ಕೆಲವು ಜನರಿಗೆ ಮಾತ್ರ ಇರುತ್ತದೆ. ಅಷ್ಟೇ ಅಲ್ಲ ಅವರಿಗೆ ಬಯಸಿಲ್ಲ ಸಿಗುತ್ತದೆ ಎನ್ನುವ ನಂಬಿಕೆ ಕೂಡ ಪ್ರಬಲವಾಗಿರುತ್ತದೆ. ಇತರರಿಗೆ ಇದು ಜಾಳಾಗಿರುತ್ತದೆ.

ನಾವ್ಯಾರಾಗಬೇಕು ಎನ್ನುವ ನಿರ್ಧಾರ, ಈ ಗುಣವನ್ನು ನಮ್ಮದಾಗಿಸಿಕೊಳ್ಳುವ ಆತುರ ಕೂಡ ನಮ್ಮದಾಗಿರಬೇಕು. ಬಯಸಿದ್ದೆಲ್ಲ ಸಿಗುವುದಿಲ್ಲ ಎನ್ನುವುದು ಮೆಜಾರಿಟಿ ಜನರ ಮೆಂಟಾಲಿಟಿ. ಬಹುಪಾಲು ಜನರು ಮಾಡಿದ್ದನ್ನು ನೀವು ಮಾಡಿದರೆ ಅಥವಾ ಮಾಡುತ್ತಿದ್ದರೆ, ಬಹುಪಾಲು ಜನರಿಗೆ ಸಿಕ್ಕಿದ ಫಲಿತಾಂಶ ಸಿಗುತ್ತದೆ.

ಬಯಸಿದ್ದೆಲ್ಲ ಸಿಗಬೇಕೆಂದರೆ ನಮ್ಮ ಮನಸ್ಥಿತಿ ಬದಲಾಯಿಸಿಕೊಳ್ಳಬೇಕು. ಆ ಗುಣದಲ್ಲಿ ನಂಬಿಕೆಯಿಡಬೇಕು. ಒಂದು ದಿನದಲ್ಲಿ ಅದು ರಕ್ತಗತವಾಗುವುದಿಲ್ಲ. ಆದರೆ ಅಸಾಧ್ಯವಂತೂ ಅಲ್ಲ.

**- ರಂಗಸ್ವಾಮಿ** ಎಂ

---



# ಪಥದರ್ಶಿ ಕಾರ್ಯಾಚರಣೆ

ಕೆಲವು ಸೈನಿಕ ಕಾರ್ಯಾಚರಣೆಗಳು ಭಾರತದ ಇತಿಹಾಸದಲ್ಲಿ ಅಚ್ಚಳಿಯದ ನೆನಪಾಗಿ ಉಳಿದುದಿದೆ. ದೇಶದ ಗತಿಯನ್ನೆ ಬದಲಿಸಿದ್ದಿದೆ. ಭವಿಷ್ಯದ ಕಾರ್ಯಾಚರಣೆಗಳಿಗೆ ಮಾದರಿಯಾಗಿ ನಿಂತುದಿದೆ. ಅಪರೇಷನ್ ಸಿಂದೂರ ಕೂಡಾ ನಿಶ್ಚಿತವಾಗಿ ಅದರಲ್ಲೊಂದು. ಒಂದು ವರ್ಷದ ಹಿಂದೆ ಇದೇ ದಿನ ಆರಂಭಿಸಿದ ಅಪರೇಷನ್ ಸಿಂದೂರ್ ಕಾರ್ಯಾಚರಣೆಯು ನೆರೆಯ ಪಾಕಿಸ್ತಾನಕ್ಕೆ ಮತ್ತು ಪಾಕ್ ಪ್ರೇರಿತ ಭಯೋತ್ಪಾದಕರಿಗೆ ಎಂದೂ ಮರೆಯಲಾರದ ಪಾಠವೊಂದನ್ನು ಕಲಿಸಿದ್ದಷ್ಟೇ ಅಲ್ಲದೆ, ಜಗತ್ತಿಗೂ ಭಾರತದ ಸೈನಿಕ ಶಕ್ತಿ ಸಾಮರ್ಥ್ಯದ ಅರಿವು ಮಾಡಿಕೊಟ್ಟಿತು. ಭಾರತದ ವಿದೇಶಾಂಗ ನೀತಿಯಲ್ಲಿ ಹಾಗೂ ಭಯೋತ್ಪಾದನಾ ನೀತಿಯಲ್ಲಿ ಕೂಡಾ ಮಹತ್ತರ ಬದಲಾವಣೆಯನ್ನು ಸಂಕೇತಿಸಿತು. ಪಾಕಿಸ್ತಾನದ ಪರಮಾಣು ಬ್ಲಾಕ್ ಮೇಲ್‌ನ್ನು ತಾನು ಲೆಕ್ಕಿಸುವುದೇ ಇಲ್ಲವೆಂಬ ಸ್ಪಷ್ಟ ಸಂದೇಶ ಸಾರಿತು. ದೇಶದ ಹಿತಾಸಕ್ತಿಯ ವಿಷಯ ಬಂದಾಗ ಯಾವುದೇ ಜಾಗತಿಕ ಒತ್ತಡಕ್ಕೂ ಮಣಿಯುವುದಿಲ್ಲವೆಂಬ ಗಟ್ಟಿ ನಿಲುವನ್ನು ಪ್ರದರ್ಶಿಸಿತು.

ಪಹಲ್ಗಾಮ್ ನಲ್ಲಿ ಪಾಕಿಸ್ತಾನಿ ಪ್ರೇರಿತ ಭಯೋತ್ಪಾದಕರು 26 ಮಂದಿ ಅಮಾಯಕ ಪ್ರವಾಸಿಗರನ್ನು ಕ್ರೂರವಾಗಿ ಹತ್ಯೆಗೈದಾಗ ಭಾರತದ ತಾಳ್ಮೆಯ ಕಟ್ಟೆಯೊಡೆದುದು ಸಹಜವೇ ಆಗಿತ್ತು. ಹಾಗಾಗಿ ಭಾರತದ ಪ್ರತಿಕ್ರಿಯೆ ಕೂಡಾ ಅಷ್ಟೇ ಕಠೋರವಾಗಿತ್ತು. 2025ರ ಮೇ 7ರಂದು ಪಾಕಿಸ್ತಾನದ 9 ಭಯೋತ್ಪಾದಕರ ನೆಲೆಗಳ ಮೇಲೆ ಕ್ಷಿಪಣಿ ದಾಳಿ ಮತ್ತು ಡ್ರೋನ್ ದಾಳಿ ನಡೆಸಲಾಯಿತು. ಅದುವರೆಗೆ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಮಾತ್ರ ಸರ್ಜಿಕಲ್ ದಾಳಿ ನಡೆಸಿದ್ದ ಭಾರತ ಈ ಬಾರಿ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯಕ್ಕೂ ನುಗ್ಗಿ ದಾಳಿ ನಡೆಸಿತು. ಆರಂಭದಲ್ಲಿ ಪಾಕಿಸ್ತಾನದ ಮಿಲಿಟರಿ ಗುರಿಗಳ ಮೇಲೆ ದಾಳಿ ನಡೆಸಲಿಲ್ಲವಾದರೂ, ಪಾಕಿಸ್ತಾನವು ಭಾರತದ ನಾಗರಿಕ ಪ್ರದೇಶಗಳ ಮೇಲೆ ದಾಳಿ ನಡೆಸಲಾರಂಭಿದ ಬಳಿಕ ಭಾರತವು ಪಾಕಿಸ್ತಾನದ ಮಿಲಿಟರಿ ಕೇಂದ್ರಗಳ ಮೇಲೂ ದಾಳಿ ನಡೆಸಿತು. ಪಾಕಿಸ್ತಾನದ ಪರಮಾಣು ಕಾರ್ಯಕ್ರಮದ ಕೇಂದ್ರವಾದ ನೂರ್ ಖಾನ್ ನೆಲೆಯ ಮೇಲೂ ಕ್ಷಿಪಣಿ ದಾಳಿ ನಡೆಸಲಾಯಿತು. ಭಾರತದ 88 ಗಂಟೆಗಳ ಕಾರ್ಯಾಚರಣೆ ಅದೆಷ್ಟು ಅತ್ಯುಗ್ರವಾಗಿತ್ತೆಂದರೆ ಪಾಕಿಸ್ತಾನವು ಮೊಣಕಾಲೂರಿ ಸಮರ ನಿಲ್ಲಿಸಲು ಕೋರಿಕೊಂಡಿತು. ಕದನ ವಿರಾಮ ಘೋಷಿಸುವಂತೆ ಮಾಡಲು ಅಮೆರಿಕ ಮೊದಲಾದ ರಾಷ್ಟ್ರಗಳ ಕೈಕಾಲು ಹಿಡಿಯಿತು.

ಭಾರತವು ಪಾಕಿಸ್ತಾನದ ಶಕ್ತಿ ಉಡುಗಿಸಿದ ಬಳಿಕ ಸಮರ ವಿರಾಮ ಘೋಷಿಸಿದ್ದು, ಆಕಾಲದಲ್ಲಿ ಕೆಲವರಿಂದ ಟೀಕೆಗೆ ಗುರಿಯಾಯಿತಾದರೂ ಅದು ಪ್ರಬುದ್ಧನಿಲುವಾಗಿತ್ತು ಎನ್ನುವುದು ಈಗ ಸ್ಪಷ್ಟವಾಗುತ್ತಿದೆ. ರಷ್ಯಾ, ಉಕ್ರೇನ್, ಇರಾನ್, ಅಮೆರಿಕಗಳು ತಾವು ಆರಂಭಿಸಿದ ಯುದ್ಧವನ್ನು ನಿಲ್ಲಿಸಲು ಹೆಣಗುತ್ತಿರುವಾಗ ಭಾರತವು ತನ್ನ ನಿಶ್ಚಿತ ಗುರಿ ಸಾಧಿಸಿದೊಡನೆ ಸಮರ ನಿಲ್ಲಿಸಿ ವಿವೇಕ ಪ್ರದರ್ಶಿಸಿತು.

**- ಕೆ.ಪಿ.ಅಶ್ವಿನ್** ರಾವ್

